# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 21-06-2018ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಮೂರನೇ ಸಿಂಡಿಕೇಟಿನ ಸಾಮಾನ್ಯ ಸಭೆಯ ನಡಾವಳಿಗಳು.**

**ಹಾಜರಿದ್ದ ಸದಸ್ಯರು:**

| | | | |
|---|---|---|---|
| 1. | ಪ್ರೊ. ಟಿ.ಕೆ.ಉಮೇಶ | – | ಕುಲಪತಿಗಳು(ಪ್ರಭಾರ) ಹಾಗೂ ಅಧ್ಯಕ್ಷರು |
| 2. | ಪ್ರೊ. ಡಿ. ನಂಜುಂಡಯ್ಯ | – | ಸದಸ್ಯರು |
| 3. | ಶ್ರೀ ಲಯನ್ ಹೆಚ್. ರಮೇಶ್ | – | ಸದಸ್ಯರು |
| 4. | ಶ್ರೀ ಮಹಮದ್‌ಅಬ್ದುಸ್ಸಲಾಂ | – | ಸದಸ್ಯರು |
| 5. | ಶ್ರೀಮತಿ ಶೃತಿತರುಣ್‌ಗಿರಿ | – | ಸದಸ್ಯರು |
| 6. | ಶ್ರೀ ಎಂ.ಎಸ್.ಎಸ್. ಕುಮಾರ್ | – | ಸದಸ್ಯರು |
| 7. | ಕು. ಸಹನಾ ಶಿವಪ್ಪ | – | ಸದಸ್ಯರು |
| 8. | ಶ್ರೀಕುಮಾರ್ | – | ಸದಸ್ಯರು |
| 9. | ಪ್ರೊ. ಎಸ್.ಎಲ್.ಸುರೇಶ್ | – | ಸದಸ್ಯರು |
| 10. | ಡಾ. ರಾಜಗೋಪಾಲ್ | – | ಸದಸ್ಯರು |
| 11. | ಡಾ. ಎ.ಟಿ.ಶಿವರಾಮು | – | ಸದಸ್ಯರು |
| 12. | ಡಾ. ಎಂ.ಪ್ರೀತಿ | – | ಸದಸ್ಯರು |
| 13. | ಶ್ರೀಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ,ಕರ್ನಾಟಕ ಸರ್ಕಾರ (ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಅವರ ಪರವಾಗಿ) | – | ಸದಸ್ಯರು |
| 14. | ಪ್ರೊ. ಜೆ. ಸೋಮಶೇಖರ್ ಕುಲಸಚಿವ(ಪರೀಕ್ಷಾಂಗ) | – | ಸದಸ್ಯರು |
| 15. | ಪ್ರೊ.ಆರ್.ರಾಜಣ್ಣ | – | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

**ಹಾಜರಾಗದ ಸದಸ್ಯರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು ಸಿಂಡಿಕೇಟ್‌ನ ಮೂರನೇ ಸಾಮಾನ್ಯ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಗಳಾಗಿ ಅಧಿಕಾರವಹಿಸಿಕೊಂಡಿರುವ ಪ್ರೊ. ಟಿ.ಕೆ.ಉಮೇಶ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಅವರನ್ನು ಸಭೆಗೆ ಸ್ವಾಗತಿಸಿ ಪರಿಚಯಿಸಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಗಳಾಗಿ ಸೇವೆ ಸಲ್ಲಿಸಿರುವ ಪ್ರೊ. ಸಿ. ಬಸವರಾಜು, ಡೀನರು, ಕಾನೂನು ನಿಕಾಯ ಮತ್ತು ಡಾ. ನಿಂಗಮ್ಮ ಸಿ. ಬೆಟ್ಸೂರ್, ಡೀನರು, ಶಿಕ್ಷಣ ನಿಕಾಯ ಅವರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ಸೇವೆ ಸಲ್ಲಿಸಿ ವರ್ಗಾವಣೆಗೊಂಡಿರುವ ಶ್ರೀಮತಿ ಡಿ.ಭಾರತಿ, ಕೆ.ಎ.ಎಸ್.(ಹಿರಿಯ ಶ್ರೇಣಿ) ಅವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ಅಧಿಕಾರ ವಹಿಸಿಕೊಂಡಿರುವ ಪ್ರೊ. ಆರ್. ರಾಜಣ್ಣ, ಅವರನ್ನು ಸಭೆಗೆ ಸ್ವಾಗತಿಸಿ ಪರಿಚಯಿಸಲಾಯಿತು.

ಹೊಸದಾಗಿ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿ ಪರಿಚಯಿಸಲಾಯಿತು.

1. ಡಾ.ರಾಜಗೋಪಾಲ್, ಪ್ರಾಂಶುಪಾಲರು, ವಿದ್ಯಾವಿಕಾಸ್ ಬಿ.ಎಡ್ ಕಾಲೇಜು.
2. ಡಾ.ಎಂ.ಪ್ರೀತಿ, ಪ್ರಾಂಶುಪಾಲರು, ಟಿಟಿಎಲ್ ಕಾಲೇಜು.

ಶ್ರೀ ಶೇಖರ್, ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ, ಅವರನ್ನೂ ಸಹ ಸಭೆಗೆ ಸ್ವಾಗತಿಸಲಾಯಿತು.

ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಶ್ರೀ ಕಾಳೇಗೌಡ ಕೆ.ಎಂ, ಪ್ರಾಂಶುಪಾಲರು, ಅನಂತಸದ್ವಿದ್ಯ ಬಿ.ಎಡ್ ಕಾಲೇಜು, ಅರಸೀಕೆರೆ.
2. ಶ್ರೀಮತಿ. ಪೊನ್ನಮ್ಮ, ಪ್ರಾಂಶುಪಾಲರು, ಮೈಸೂರ್ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಆರ್ಟ್ಸ್, ಮೈಸೂರು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| 1 | ದಿನಾಂಕ 05-03-2018 ಮತ್ತು 06-03-2018 ರಂದು ನಡೆದ ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | "ದಿನಾಂಕ 6-3-2018ರಂದು ನಡೆದ ಸಿಂಡಿಕೇಟ್ ಎರಡನೇ ಸಾಮಾನ್ಯ ಸಭೆಯ ನಡಾವಳಿಯ ವಿಷಯ ಸಂಖ್ಯೆ: 2018/2.47ಕ್ಕೆ ಕುಲಸಚಿವ (ಪರೀಕ್ಷಾಂಗ) ಅವರು ಸಲ್ಲಿಸಿದ ಆಕ್ಷೇಪಣೆಯನ್ನು ದಿನಾಂಕ 21-06-2018ರಂದು ನಡೆದ ಸಿಂಡಿಕೇಟ್ ಸಭೆಯು ಅಂಗೀಕರಿಸಿ ಎಸ್‌ಸಿ/ಎಸ್‌ಟಿ/ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ಪಿಹೆಚ್.ಡಿ. ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಶೇ.45 ಅಂಕಗಳನ್ನು ಗಳಿಸಲು ನಿಗದಿಪಡಿಸಿರುವುದನ್ನು ಜಾರಿಗೊಳಿಸಲು ಸರ್ವಾನುಮತದಿಂದ ಅನುಮೋದಿಸಲಾಯಿತು" ಎಂಬ ತಿದ್ದುಪಡಿಯೊಂದಿಗೆ ದಿನಾಂಕ 05-03-2018ರಂದು ನಡೆದ ಮತ್ತು 06-03-2018ರಂದು ಮುಂದುವರೆದ ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ದೃಢೀಕರಿಸಿತು. |
| 2 | ದಿನಾಂಕ 05-03-2018 ಮತ್ತು 06-03-2018 ರಂದು ನಡೆದ ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| ತೀರ್ಮಾನ | ಗಮನಿಸಲಾಯಿತು. |
| 3 | ದಿನಾಂಕ 12-03-2018ರಂದು ನಡೆದ ಘಟಿಕೋತ್ಸವದ ಪೂರ್ವಭಾವಿಯಾಗಿ ನಡೆದ ಸಿಂಡಿಕೇಟಿನ ವಿಶೇಷ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | ದೃಢೀಕರಿಸಲಾಯಿತು. |

| | |
|---|---|
| **4** | ದಿನಾಂಕ 24-03-2018ರಂದು ನಡೆದ ಸಿಂಡಿಕೇಟಿನ ವಿಶೇಷ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ** | ವಿಷಯ ಸಂಖ್ಯೆ: 3.5ರ ವಿಷಯ "1988-89ರಿಂದ 2013-14ನೇ ಸಾಲಿನವರೆಗೆ ಅತಿಥಿ ಉಪನ್ಯಾಸಕರುಗಳು ದಿನಗೂಲಿ/ಸಂಚಿತ ವೇತನದಡಿಯಲ್ಲಿ ತಾತ್ಕಾಲಿಕ ಬೋಧಕ/ಬೋಧಕೇತರ ನೌಕರರುಗಳಿಗೆ ಸಂಭಾವನೆ ಪಾವತಿಸಿರುವ ಬಗ್ಗೆ" ಇದರ ಶೀರ್ಷಿಕೆಯನ್ನು "1999-2000ರಿಂದ 2014-15ನೇ ಸಾಲಿನವರೆಗೆ ಪರೀಕ್ಷಾ ಕಾರ್ಯಗಳಿಗಾಗಿ ಬೋಧಕ/ಬೋಧಕೇತರ ನೌಕರರುಗಳಿಗೆ ಪರೀಕ್ಷಾ ಸಂಭಾವನೆ ಮತ್ತು ಭತ್ಯೆಗಳನ್ನು ಪಾವತಿಸಿರುವ ಬಗ್ಗೆ" ಎಂದು ಸರಿಪಡಿಸಿಕೊಳ್ಳಲು ಅನುಮತಿಸಿ, ದಿನಾಂಕ 24-03-2018ರಂದು ನಡೆದ ಸಿಂಡಿಕೇಟಿನ ವಿಶೇಷ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು. |
| **5** | ದಿನಾಂಕ 24-03-2018ರಂದು ನಡೆದ ಸಿಂಡಿಕೇಟಿನ ವಿಶೇಷ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| **ತೀರ್ಮಾನ** | ಗಮನಿಸಲಾಯಿತು. |
| **2018/5.1** | ಡಾ. ನಿರಂಜನ, ಪ್ರಾಧ್ಯಾಪಕರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ. ಮಾನಸಗಂಗೋತ್ರಿ, ಮೈಸೂರು, ಇವರ ಹುದ್ದೆಗೆ ಸಂಬಂಧಿಸಿದಂತೆ Cadre clearance ಬಗ್ಗೆ Ministry of External Affairs, Government of India ಇವರಿಗೆ ಬರೆದಿರುವ ಪತ್ರದ ಬಗ್ಗೆ – ಸ್ಥಿರೀಕರಣಕ್ಕಾಗಿ. |
| **ತೀರ್ಮಾನ** | ಡಾ. ನಿರಂಜನ, ಪ್ರಾಧ್ಯಾಪಕರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ. ಮಾನಸಗಂಗೋತ್ರಿ, ಮೈಸೂರು, ಇವರ ಹುದ್ದೆಗೆ ಸಂಬಂಧಿಸಿದಂತೆ Cadre clearance ಬಗ್ಗೆ Ministry of External Affairs, Government of Indiaಇವರಿಗೆ ಬರೆದಿರುವ ಪತ್ರದ ಅಂಶಗಳನ್ನು ಪರಿಶೀಲಿಸಿದ ಸಿಂಡಿಕೇಟ್ ವಿ.ವಿ.ಯು ತೆಗೆದುಕೊಂಡಿರುವ ಕ್ರಮವನ್ನು ಸ್ಥಿರೀಕರಿಸಿತು. |
| **2018/5.2** | ಪ್ರೊ.ವೈ.ಎಸ್.ಸಿದ್ದೇಗೌಡ, ಪ್ರಾಧ್ಯಾಪಕರು, ಸಮಾಜ ಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ತುಮಕೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ ಕರ್ತವ್ಯದಿಂದ ಬಿಡುಗಡೆ ಮಾಡಿರುವ ವಿಷಯ – ಸ್ಥಿರೀಕರಣಕ್ಕಾಗಿ. |
| **ತೀರ್ಮಾನ** | ಪ್ರೊ. ವೈ.ಎಸ್.ಸಿದ್ದೇಗೌಡ, ಪ್ರಾಧ್ಯಾಪಕರು, ಸಮಾಜ ಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರು ತುಮಕೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ನೇಮಕಗೊಂಡಿರುವುದರಿಂದ ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿನ ಕರ್ತವ್ಯದಿಂದ ಬಿಡುಗಡೆ ಮಾಡಲು ತೆಗೆದುಕೊಂಡಿರುವ ಕ್ರಮವನ್ನು ಅನುಸಮರ್ಥಿಸುವುದರೊಂದಿಗೆ ಹುದ್ದೆಯ ಮೇಲಿನ ಅವರ ಹಕ್ಕನ್ನು ಕಾಯ್ದಿರಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/5.3** | ಪ್ರೊ. ಮುಜಾಫರ್ ಅಸಾದಿ, ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಪ್ರಸ್ತಾಪಿತ ನೂತನ ರಾಯಚೂರು ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಿಯನ್ನಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ ಕರ್ತವ್ಯದಿಂದ ಬಿಡುಗಡೆ ಮಾಡಿರುವ ವಿಷಯ – ಸ್ಥಿರೀಕರಣಕ್ಕಾಗಿ. |
| **ತೀರ್ಮಾನ** | ಪ್ರೊ. ಮುಜಾಫರ್ ಅಸಾದಿ, ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಪ್ರಸ್ತಾಪಿತ ನೂತನ ರಾಯಚೂರು ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಿಯನ್ನಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ ಇವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿರುವುದನ್ನು ಸಿಂಡಿಕೇಟ್ ಸ್ಥಿರೀಕರಿಸಿತು ಹಾಗೂ ಅವರ ಹುದ್ದೆಯ ಮೇಲಿನ ಹಕ್ಕನ್ನು ಕಾಯ್ದಿರಿಸಿ ಅವರು ವಿಶೇಷಾಧಿಕಾರಿಯಾಗಿ ಕಾರ್ಯನಿರ್ವಹಿಸುವ ಅವಧಿಯನ್ನು ನಿಯೋಜನೆಯೆಂದು ಪರಿಗಣಿಸಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2018/5.4** | ಸಿಡಿಎಸ್ಎಸ್ ಸಮಿತಿಯನ್ನು ಪುನರ್ ರಚಿಸಿರುವ ಬಗ್ಗೆ ಅನುಸಮರ್ಥನೆ ಕೋರಿ. |
| ತೀರ್ಮಾನ | ಶ್ರೀಮತಿ ಹಂಸವೇಣಿ.ಎಲ್, ಸಹಾಯಕ ಪ್ರಾಧ್ಯಾಪಕರು, ಕಂಪ್ಯೂಟರ್ ಅಧ್ಯಯನ ವಿಭಾಗ ಇವರನ್ನು ಹಾಲಿ ಇರುವ ಸಮಿತಿಯಿಂದ ಕೈಬಿಟ್ಟು ಸಿಂಡಿಕೇಟ್ ಸದಸ್ಯರಾದ ಪ್ರೊ. ನಂಜುಂಡಯ್ಯರವರನ್ನು ಸದಸ್ಯರನ್ನಾಗಿ ಸಿಡಿಎಸ್ಎಸ್ (ಕಮಿಟಿ ಫಾರ್ ಡೆವಲಪ್‌ಮೆಂಟ್ ಆಫ್ ಸೈನ್ಸ್ ಇನ್ ಸ್ಕೂಲ್) ಸಮಿತಿಗೆ ನೇಮಕಮಾಡಿಕೊಳ್ಳಲು ಮತ್ತು ಡಾ. ಆಶಾ ಅಯ್ಯಂಗಾರ್, ಯುವರಾಜ ಕಾಲೇಜು, ಪ್ರೊ. ಬಿ.ಕೆ.ಜಗದೀಶ್, ನಿವೃತ್ತ ಪ್ರಾಧ್ಯಾಪಕರು, ಯುವರಾಜ ಕಾಲೇಜು ಅವರನ್ನು ಸೇರ್ಪಡೆಮಾಡಿಕೊಂಡು ಸಿಡಿಎಸ್ಎಸ್ ಸಮಿತಿಯನ್ನು ಪುನರ್ ರಚಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **2018/5.5** | ಡಾ. ಉಷಾರಾಣಿ, ನಿವೃತ್ತ ಪ್ರಾಧ್ಯಾಪಕರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು 1983ರಲ್ಲಿ ಉಪನ್ಯಾಸಕರಾಗಿ ನೇಮಕಗೊಂಡಿದ್ದ ಸಂದರ್ಭದಲ್ಲಿ ಐದು ವರ್ಷದಲ್ಲಿ ಪಿಎಚ್.ಡಿ. ಪದವಿಯನ್ನು ಪಡೆಯಬೇಕು ಎಂದು ವಿಧಿಸಿದ್ದ ಷರತ್ತಿನ ಬಗ್ಗೆ. |
| ತೀರ್ಮಾನ | ಡಾ. ಉಷಾರಾಣಿ, ನಿವೃತ್ತ ಪ್ರಾಧ್ಯಾಪಕರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ 12-01-1983ರಂದು ಉಪನ್ಯಾಸಕ ಹುದ್ದೆಗೆ ನೇಮಕಗೊಂಡ ಸಂದರ್ಭದಲ್ಲಿ ಐದು ವರ್ಷಗಳೊಳಗೆ ಪಿಎಚ್.ಡಿ., ಪದವಿಯನ್ನು ಹೊಂದಬೇಕೆಂದು ಇಲ್ಲವಾದಲ್ಲಿ ವೇತನಬಡ್ತಿಯನ್ನು ತಡೆಹಿಡಿಯಬೇಕೆಂಬ ಷರತ್ತಿನೊಡನೆ ನೇಮಕವಾಗಿದ್ದಾಗ್ಯೂ ವೇತನಬಡ್ತಿಯನ್ನು ನೀಡಲಾಗಿದೆ. ಆದರೆ ಸದರಿ ಪ್ರಾಧ್ಯಾಪಕರು ದಿನಾಂಕ 21-01-1982ರಂದು ಪಿಹೆಚ್‌ಡಿ ಪದವಿಯ ವ್ಯಾಸಂಗಕ್ಕೆ ನೋಂದಣಿಯಾಗಿ ಮಹಾಪ್ರಬಂಧವನ್ನು ದಿನಾಂಕ 11-05-1987ರಂದು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲಾಗಿದ್ದು, ಮಹಾಪ್ರಬಂಧವನ್ನು ಮಂಡಿಸಿದ ಮೂರು ವರ್ಷ ಎಂಟು ತಿಂಗಳ ನಂತರ ಅಂದರೆ, 1992ರಲ್ಲಿ ಇವರಿಗೆ ಪಿಹೆಚ್‌ಡಿ ಪದವಿಯನ್ನು ಪ್ರಧಾನ ಮಾಡಲಾಗಿರುವುದನ್ನು ಗಮನಿಸಿದ ಸಿಂಡಿಕೇಟ್, ಪಿಹೆಚ್.ಡಿ. ಮಹಾಪ್ರಬಂಧವನ್ನು ವಿಶ್ವವಿದ್ಯಾನಿಲಯವು ನೇಮಕಗೊಂಡ ಸಂದರ್ಭದಲ್ಲಿ ವಿಧಿಸಿದ್ದ ಷರತ್ತಿನ ಅವಧಿಯೊಳಗೆ ಮಂಡಿಸಿರುವುದರಿಂದ ಈ ದಿನಾಂಕವನ್ನು ಪರಿಗಣಿಸಿ ಈಗಾಗಲೇ ವಿತರಿಸಲಾಗಿರುವ ವೇತನಬಡ್ತಿಗಳನ್ನು ಹಿಂಪಡೆಯದೇ ಪಿಂಚಣಿ ಸೌಲಭ್ಯವನ್ನು ಮಂಜೂರು ಮಾಡಲು ಸಿಂಡಿಕೇಟ್ ಅನುಮೋದಿಸಿತು. |
| **2018/5.6** | ಡಾ. ಸ್ವರೂಪ್ ಟಿ.ಆರ್., ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರು, ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರು ಪೋಸ್ಟ್ ಡಾಕ್ಟೋರಲ್ ಫೆಲೋಶಿಪ್‌ನ ಅಡಿಯಲ್ಲಿ ಚೀನಾದಲ್ಲಿ ಕೆಲಸ ನಿರ್ವಹಿಸಲು ವೇತನರಹಿತ ರಜೆಯ ಮೇಲೆ ತೆರಳಲು ಅನುಮತಿ ಕೋರಿರುವ ಬಗ್ಗೆ. |
| ತೀರ್ಮಾನ | ಡಾ. ಸ್ವರೂಪ್ ಟಿ.ಆರ್., ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರು, ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರು ಪೋಸ್ಟ್ ಡಾಕ್ಟೋರಲ್ ಫೆಲೋಶಿಪ್‌ನ ಅಡಿಯಲ್ಲಿ ವೇತನರಹಿತ ರಜೆಯ ಮೇಲೆ ಚೀನಾದಲ್ಲಿ ದಿನಾಂಕ 5-4-2018ರಿಂದ 3-10-2018ರವರೆಗೆ School of Chemistry and Pharmaceutical Sciences, Guangxi Normal University, Guilin, China ಇಲ್ಲಿ ಸಂಶೋಧನಾ ಕಾರ್ಯನಿರ್ವಹಿಸಲು ಹಾಗೂ ತೆರಳಲು ಸಿಂಡಿಕೇಟ್ ಸಭೆಯು ಘಟನೋತ್ತರವಾಗಿ ಅನುಮೋದಿಸಿತು. |

| | |
|---|---|
| 2018/5.7 | ಕ್ರಿಶ್ಚಿಯಾನಿಟಿ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗೆಗೆ. |
| ತೀರ್ಮಾನ | ಕ್ರಿಶ್ಚಿಯಾನಿಟಿ ಪೀಠದ ಅಧಿನಿಯಮದ ಕಂಡಿಕೆ (i), (ii) (iii)ರ ಅನ್ವಯ, Dr. Fr. John Peter Lazaar SAC ಇವರನ್ನು ಕ್ರಿಶ್ಚಿಯಾನಿಟಿ ಪೀಠದ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನಿಯಮಾನುಸಾರ, ಒಂದು ವರ್ಷದ ಅವಧಿಗೆ ರೂ. 8,000/-ಗಳ ಗೌರವಧನದೊಂದಿಗೆ ನೇಮಕ ಮಾಡಲು ಸಿಂಡಿಕೇಟ್ ಅನುಮೋದಿಸಿತು. |
| 2018/5.8 | ಡಾ. ಮಾನೆ, ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ವಿರುದ್ಧ ದಾಖಲಾಗಿದ್ದ ಲೈಂಗಿಕ ಕಿರುಕುಳದ ದೂರಿನ ಮೇಲೆ ವಿಶ್ವವಿದ್ಯಾನಿಲಯದ ಆಂತರಿಕ ದೂರು ಸಮಿತಿಯು ನೀಡಿದ ವರದಿಯ ಸಂಬಂಧ ದಿನಾಂಕ 06-03-2018ರಂದು ನಡೆಯ ಸಿಂಡಿಕೇಟ್ ಸಭೆಯು ತೆಗೆದುಕೊಂಡಿರುವ ತೀರ್ಮಾನವನ್ನು ಮರುಪರಿಶೀಲಿಸುವ ಬಗ್ಗೆ. |
| ತೀರ್ಮಾನ | ಡಾ. ಮಾನೆ, ಪ್ರಾಧ್ಯಾಪಕರು ಇವರನ್ನು ಹಾಲಿ ಸಂಶೋಧನೆ ಕೈಗೊಂಡಿರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮಾರ್ಗದರ್ಶಕರಾಗಿ ಮುಂದುವರೆಸಿ ಉಳಿದಂತೆ ಡಾ. ಮಾನೆ, ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ವಿರುದ್ಧ ದಾಖಲಾಗಿದ್ದ ಲೈಂಗಿಕ ಕಿರುಕುಳದ ದೂರಿನ ಮೇಲೆ ವಿಶ್ವವಿದ್ಯಾನಿಲಯದ ಆಂತರಿಕ ದೂರು ಸಮಿತಿಯು ನೀಡಿದ ವರದಿಯ ಸಂಬಂಧ ದಿನಾಂಕ 06-03-2018ರಂದು ನಡೆದ ಸಭೆಯು ತೆಗೆದುಕೊಂಡಿರುವ ತೀರ್ಮಾನವನ್ನು ಕಾರ್ಯರೂಪಕ್ಕೆ ತರಲು ಸಿಂಡಿಕೇಟ್ ತೀರ್ಮಾನಿಸಿತು. |
| 2018/5.9 | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Programಗಳನ್ನು ನಡೆಸುತ್ತಿರುವSampoorna International Institute of Agri Sciences & Horticultural Technology, Channapatna ಸಂಸ್ಥೆಯ ವಿಳಾಸ ಬದಲಾವಣೆ ಸಂಬಂಧ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Programಗಳನ್ನು ನಡೆಸುತ್ತಿರುವSampoorna International Institute of Agri Sciences & Horticultural Technology, Channapatna ಇವರಿಗೆ No. 271/2, K.B.Doddi Grama, Madapura Doddi, Nidagatta Gram Panchayath, Athkur Hobli, Maddur Taluk, Mandya Districtಇಲ್ಲಿಗೆ ಸದರಿ ಸಂಸ್ಥೆಯು ವಿಳಾಸ ಬದಲಾವಣೆ ಮಾಡುವ ಸಂಬಂಧ ಪರಿವೀಕ್ಷಣಾ ಸಮಿತಿಯು ಭೇಟಿ ನೀಡಿ ಪರಿವೀಕ್ಷಿಸಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| 2018/5.10 | ಡಾ. ಕೆ.ಎ.ರವೀಶ, ನಿವೃತ್ತ ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ ಅವರು ನಿವೃತ್ತಿಯ ನಂತರ ತರಗತಿಗಳನ್ನು ತೆಗೆದುಕೊಂಡಿರುವ ಸಂಬಂಧ ಅನುಮತಿ ನೀಡುವಂತೆ ಕೋರಿರುವ ಬಗ್ಗೆ. |
| ತೀರ್ಮಾನ | ಡಾ. ಕೆ.ಎ.ರವೀಶ, ನಿವೃತ್ತ ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ ಅವರು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ದಿನಾಂಕ 01-03-2018ರಿಂದ 4-4-2018ರವರೆಗೆ ನಿವೃತ್ತಿಯ ನಂತರವೂ ತರಗತಿಗಳನ್ನು ತೆಗೆದುಕೊಂಡಿರುವುದನ್ನು ಗಮನಿಸಿ ವಿಭಾಗೀಯ ಮಂಡಳಿಯ ಶಿಫಾರಸ್ಸಿನ ಅನ್ವಯ ಘಟನೋತ್ತರವಾಗಿ ಅನುಮತಿಸಿ ಈ ಸಂಬಂಧ ಅವರಿಗೆ ರೂ. 25,000/-ಗಳ ಗೌರವ ಸಂಭಾವನೆಯನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2018/5.11** | ಜೈವಿಕತಂತ್ರಜ್ಞಾನ ಅಧ್ಯಯನ ವಿಭಾಗದಲ್ಲಿ ಕಾರ್ಯಗತಗೊಂಡಿರುವ ಐಸಿಎಆರ್ ಡಿಎಂಆರ್‌ಎಲ್ ಯೋಜನೆಯಲ್ಲಿನ ಹಿರಿಯ ತಾಂತ್ರಿಕ ಸಹಾಯಕರ ಹುದ್ದೆಯನ್ನು ತೆಗೆದು ಹಾಕುವ ಬಗ್ಗೆ. |
| ತೀರ್ಮಾನ | ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದಲ್ಲಿ ಕಾರ್ಯಗತಗೊಂಡಿರುವ ಐಸಿಎಆರ್ ಡಿಎಂಆರ್‌ಎಲ್ ಯೋಜನೆಯಲ್ಲಿರುವ ಎರಡು ಹುದ್ದೆಗಳನ್ನು ಕಡಿಮೆ ಮಾಡಲಾಗಿದ್ದು ಹಾಗೂ ಯೋಜನೆಯಲ್ಲಿ ಹಿರಿಯ ತಾಂತ್ರಿಕ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಪ್ರದೀಪ್ ಸಿ.ಕೆ. ಇವರನ್ನು ಯೋಜನೆಯ ಕರ್ತವ್ಯದಿಂದ ಯೋಜನೆಯ ಪ್ರಿನ್ಸಿಪಲ್ ಸೈಂಟಿಸ್ಟ್ ಅವರು ಬಿಡುಗಡೆಗೊಳಿಸಿರುವ ಹಾಗೂ ಸದರಿ ವಿಷಯವನ್ನು ಅನುದಾನಿತ ಸಂಸ್ಥೆಗೆ ವಿಶ್ವವಿದ್ಯಾನಿಲಯದ ವತಿಯಿಂದ ತಿಳಿಸಿರುವ ವಿಷಯವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/5.12** | ಪ್ರೊ. ಸೆಲ್ವಿ ದಾಸ್ ನಗದು ಬಹುಮಾನ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ದಾನಿಗಳು ದತ್ತಿಯ ನಿಬಂಧನೆಯಲ್ಲಿ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. 20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಹಣವನ್ನು M.Sc. in Human Development ಸ್ನಾತಕೋತ್ತರ ಪದವಿಯಲ್ಲಿ ಅತಿ ಹೆಚ್ಚು ಅಂಕ/ಉತ್ತಮ ಗ್ರೇಡ್ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ನಗದುಬಹುಮಾನ ವಿತರಿಸಲು **"ಪ್ರೊ. ಸೆಲ್ವಿ ದಾಸ್ ನಗದು ಬಹುಮಾನ ದತ್ತಿ ಸ್ಥಾಪನೆ"** ಮಾಡಲು ಸಿಂಡಿಕೇಟ್ ಅನುಮೋದಿಸಿತು. |
| **2018/5.13** | Scintilla Academy for Applied Sciences' Education & Research ಪ್ರಸಕ್ತ ಸಂಸ್ಥೆಯ ವಿಳಾಸದಿಂದ ಬದಲಾವಣೆಗೆ ಅವಕಾಶ ಕಲ್ಪಿಸಿರುವ ಬಗ್ಗೆ ಅನುಸಮರ್ಥನೆ ಕೋರಿ. |
| ತೀರ್ಮಾನ | Scintilla Academy for Applied Sciences' Education & Research ಸಂಸ್ಥೆಯ ವಿಳಾಸದಿಂದ Scintilla Academy for Applied Sciences' Education & Research, BGS Health & Education City, 67, Uttarahalli Road, Kengeri, Bengaluru -560 060ಇಲ್ಲಿಗೆ ಬದಲಾವಣೆಮಾಡಿಕೊಳ್ಳಲು ಅನುಸರಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/5.14** | ಶ್ರೀ ಎಂ.ಎಂ.ಶ್ರೀಕಂಠಸ್ವಾಮಿ, ಪ್ರಥಮ ದರ್ಜೆ ಗುಮಾಸ್ತರು, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಅನಧಿಕೃತ ಗೈರುಹಾಜರಿಯ ಸಂಬಂಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ. |
| ತೀರ್ಮಾನ | ಶ್ರೀ ಎಂ.ಎಂ.ಶ್ರೀಕಂಠಸ್ವಾಮಿ, ಪ್ರಥಮ ದರ್ಜೆ ಗುಮಾಸ್ತರು, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಅನಧಿಕೃತ ಗೈರುಹಾಜರಿಯ ಸಂಬಂಧ, ಕೆಸಿಎಸ್‌ಆರ್ ನಿಯಮಗಳ ಪ್ರಕಾರ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸಿ.ಸಿ.ಎ. ಅಧಿನಿಯಮ 1983ರ ಪ್ರಕಾರ ಶಿಸ್ತು ಕ್ರಮ ಜರುಗಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/5.15** | ವಿಶ್ವವಿದ್ಯಾನಿಲಯದಲ್ಲಿ ಸೇವೆಯಲ್ಲಿರುವಾಗಲೇ ನಿಧನರಾದ ಉದ್ಯೋಗಿಯ ಕುಟುಂಬದ ಅವಲಂಬಿತರೊಬ್ಬರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಅಧಿನಿಯಮ ಮತ್ತು ಸರ್ಕಾರಿ ನಿಯಮಗಳ ಪ್ರಕಾರ ಸೇವೆಯಲ್ಲಿರುವಾಗಲೇ ನಿಧನರಾದ ದಿವಂಗತ ಮಹದೇವಸ್ವಾಮಿ, ನಿಲಯ ಸಹಾಯಕರು ಇವರ ಕುಟುಂಬದ ಅವಲಂಬಿತರೊಬ್ಬರಿಗೆ ಅಂದರೆ ಮೃತರ ಪತ್ನಿ ಶ್ರೀಮತಿ ನಾಗವೇಣಿ ಇವರಿಗೆ ಅನುಕಂಪದ ಆಧಾರದ ಮೇಲೆ ದ್ವಿತೀಯದರ್ಜೆ ಗುಮಾಸ್ತರ ಉದ್ಯೋಗ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2018/5.16** | ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿಗೆ ಆಹ್ವಾನಿಸುವ ಅತಿಥಿಗಳಿಗೆ ಮತ್ತು ಗಣ್ಯರಿಗೆ ಕಿ.ಮೀ, ಒಂದಕ್ಕೆ ರೂ 6/-ಗಳಂತೆ ನೀಡಬೇಕಾಗಿರುವ ಪ್ರಯಾಣ ಭತ್ಯೆಯನ್ನು ಪರಿಷ್ಕರಿಸುವ ಬಗ್ಗೆ. |
| **ತೀರ್ಮಾನ** | ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಆಯೋಜಿಸುವ ವಿಚಾರ ಸಂಕೀರಣ/ಕಾರ್ಯಾಗಾರ/ಉಪನ್ಯಾಸ ಮಾಲೆ ಕಾರ್ಯಕ್ರಮಗಳಿಗೆ ಆಹ್ವಾನಿಸಲ್ಪಡುವ ಗಣ್ಯರಿಗೆ ಮತ್ತು ಅತಿಥಿಗಳಿಗೆ ಪ್ರಯಾಣ ಭತ್ಯೆ ಕಿ.ಮೀ ಒಂದಕ್ಕೆ ರೂ 6/-ಗಳಂತೆ ಪಾವತಿಸಲು ಸಿಂಡಿಕೇಟ್ ಅನುಮೋದಿಸಿತು. |
| **2018/5.17** | ವಿಶ್ವವಿದ್ಯಾನಿಲಯದಲ್ಲಿ the Karnataka Civil Services (Revised Pay) Rules, 2018 and Related Ordersಗಳನ್ನು ಜಾರಿಗೊಳಿಸುವ ಬಗ್ಗೆ. |
| **ತೀರ್ಮಾನ** | ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 06 ಎಸ್ ಆರ್ ಪಿ 2018, ಬೆಂಗಳೂರು, ದಿನಾಂಕ 19-04-2018ರನ್ವಯ ಆರನೇ ರಾಜ್ಯ ವೇತನ ಆಯೋಗದ ಶಿಫಾರಸ್ಸಿನಂತೆ ಪರಿಷ್ಕೃತ ವೇತನ ಶ್ರೇಣಿಯ ಸೌಲಭ್ಯಗಳನ್ನು ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗಳಿಗೆ ವಿಸ್ತರಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/5.18** | ಡಾ. ಆರ್. ಜೆರಿ ಆರೋಕ್ಯಮೇರಿ, ಅಧೀಕ್ಷಕರು, ಯುವರಾಜ ಕಾಲೇಜು, ಶ್ರೀಮತಿ ನಾಗರತ್ನಮ್ಮ, ಶೀಘ್ರಲಿಪಿಗಾರರು, ಹಣಕಾಸು ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರುಗಳು ವಿದೇಶಕ್ಕೆ ತೆರಳಲು ಅನುಮತಿ ನೀಡಿರುವ ಬಗ್ಗೆ. |
| **ತೀರ್ಮಾನ** | 1. ಡಾ. ಆರ್. ಜೆರಿ ಆರೋಕ್ಯಮೇರಿ, ಅಧೀಕ್ಷಕರು, ಯುವರಾಜ ಕಾಲೇಜು, ಮೈಸೂರು ವಿ.ವಿ. ಇವರು ದಿನಾಂಕ 28-05-2018ರಿಂದ 15-06-2018ರವರೆಗೆ ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಧಾರ್ಮಿಕ ಪ್ರವಾಸ ಕೈಗೊಳ್ಳುವ ಸಂಬಂಧ ಯುರೋಪ್ ದೇಶಕ್ಕೆ ತೆರಳಲು ಅನುಮತಿ ನೀಡಿರುವುದನ್ನು ಮತ್ತು<br>2. ಶ್ರೀಮತಿ ನಾಗರತ್ನಮ್ಮ, ಶೀಘ್ರಲಿಪಿಗಾರರು, ಹಣಕಾಸು ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ 9-7-2018ರಿಂದ 26-7-2018ರವರೆಗೆ ಖಾಸಗಿಯಾಗಿ ತಮ್ಮ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಯುರೋಪ್ ದೇಶಕ್ಕೆ ಪ್ರವಾಸ ಕೈಗೊಳ್ಳುತ್ತಿರುವುದಕ್ಕೆ ವಿಶ್ವವಿದ್ಯಾನಿಲಯವು ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/5.19** | ಡಾ. ಎ.ಎಸ್. ಪ್ರವೀಣ, ಸಂಖ್ಯಾಶಾಸ್ತ್ರ ಅಧ್ಯಯನ ವಿಭಾಗ, ಇವರನ್ನು ಯು.ಜಿ.ಸಿ. ಫ್ಯಾಕಲ್ಟಿ ರೀಚಾರ್ಜ್ ಪ್ರೋಗ್ರಾಂ ಅಡಿಯಲ್ಲಿ ಪೋಸ್ಟ್ ಡಾಕ್ಟರಲ್ ಫೆಲೋ (Assistant Professor, Mathematical Sciences) ಆಗಿ ಕಾರ್ಯನಿರ್ವಹಿಸಲು ಅನುಮತಿ ನೀಡುವ ಬಗ್ಗೆ. |
| **ತೀರ್ಮಾನ** | ಯು.ಜಿ.ಸಿ. ಫ್ಯಾಕಲ್ಟಿ ರೀಚಾರ್ಜ್ ಪ್ರೋಗ್ರಾಂ ಅಡಿಯಲ್ಲಿ ಸಂಖ್ಯಾಶಾಸ್ತ್ರ ಅಧ್ಯಯನ ವಿಭಾಗಕ್ಕೆ Assistant Professor, Mathematical Sciences ಆಗಿ ಕಾರ್ಯನಿರ್ವಹಿಸಲು ಆಯ್ಕೆಯಾಗಿರುವ ಡಾ. ಎ.ಎಸ್.ಪ್ರವೀಣ ಇವರ ಶೈಕ್ಷಣಿಕ ದಾಖಲಾತಿಗಳನ್ನು ಸದರಿ ವಿಭಾಗದ ಅಧ್ಯಕ್ಷರು ಪರಿಶೀಲಿಸಿ ಶಿಫಾರಸ್ಸು ಮಾಡಿದ್ದು ಈ ಸಂಬಂಧ ಈಗಾಗಲೇ ಯು.ಜಿ.ಸಿ.ಯೊಂದಿಗೆ ಒಡಂಬಡಿಕೆಗೊಳಪಟ್ಟಿರುವುದನ್ನು ಗಮನಿಸಿ ಹಾಗೂ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗವೇ ಇವರ ವೇತನವನ್ನು ಭರಿಸುವುದರಿಂದ ಡಾ. ಎ.ಎಸ್.ಪ್ರವೀಣ ಸಂಖ್ಯಾಶಾಸ್ತ್ರ ಅಧ್ಯಯನ ವಿಭಾಗಕ್ಕೆ ಸಹಾಯಕ ಪ್ರಾಧ್ಯಾಪಕರಾಗಿ ನಿಯೋಜಿಸಿಕೊಳ್ಳಲು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| 2018/5.20 | ಡಾ. ಎ.ಎಂ.ಸುಧಾಕರ್, ಸಿಸ್ಟಮ್ ಇಂಜಿನಿಯರ್, ವಿಶ್ವವಿದ್ಯಾನಿಲಯ ಗಣಕಯಂತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಮೂರು ವಿದ್ಯಾರ್ಥಿಗಳಿಗೆ M.Sc in Cyber Security & P.G. Diploma in Software Development (PGDSD) ಕೋರ್ಸ್‌ಗೆ ಅನರ್ಹ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡಿರುವ ಬಗೆಗೆ. |
| ತೀರ್ಮಾನ | ಅವಶ್ಯ ವಿದ್ಯಾರ್ಹತೆ ಹೊಂದಿರದ ಮೂರು ವಿದ್ಯಾರ್ಥಿಗಳಿಗೆ M.Sc in Cyber Security & P.G. Diploma in Software Development (PGDSD) ಕೋರ್ಸ್‌ಗೆ ಪ್ರವೇಶಾತಿ ನೀಡಿರುವುದನ್ನು ಗಮನಿಸಿದ ಸಿಂಡಿಕೇಟ್ ವಿಶ್ವವಿದ್ಯಾನಿಲಯದ "Equivalance Committee" ಮುಂದೆ ಮಂಡಿಸಿ ಅದರ ತೀರ್ಮಾನದಂತೆ ಕ್ರಮತೆಗೆದುಕೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| 2018/5.21 | ಡಾ. ಜಗದೀಶ್ ಕುಮಾರ್ ಟಿ.ಎಸ್., ಸಹಾಯಕ ಪ್ರಾಧ್ಯಾಪಕರು, ರೇಷ್ಮೆಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಥಾಯ್‌ಲ್ಯಾಂಡ್, ಮಲೇಶಿಯಾ ಮತ್ತು ಸಿಂಗಪೂರ್ ದೇಶಗಳಿಗೆ ತೆರಳಲು ಅನುಮತಿ ನೀಡಿರುವ ಸಂಬಂಧ ಅನುಸಮರ್ಥನೆಯನ್ನು ಕೋರುವ ಬಗ್ಗೆ. |
| ತೀರ್ಮಾನ | ಡಾ.ಜಗದೀಶ್ ಕುಮಾರ್ ಟಿ.ಎಸ್., ಸಹಾಯಕ ಪ್ರಾಧ್ಯಾಪಕರು, ರೇಷ್ಮೆಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ 15-05-2018ರಿಂದ 24-05-2018ರವರೆಗೆ ಖಾಸಗಿಯಾಗಿ ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಥಾಯ್‌ಲ್ಯಾಂಡ್, ಮಲೇಶಿಯಾ ಮತ್ತು ಸಿಂಗಪೂರ್ ದೇಶಗಳಿಗೆ ವೈಯಕ್ತಿಕ ಭೇಟಿಯ ನಿಮಿತ್ತ ತೆರಳಲು ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2018/5.22 | ವಿಶ್ವವಿದ್ಯಾನಿಲಯದ ತಾತ್ಕಾಲಿಕ 122 ಅಧ್ಯಾಪಕೇತರ ಉದ್ಯೋಗಿಗಳ EPF & ESI ವಂತಿಕೆಗಳನ್ನು ಕಡಿತಗೊಳಿಸುವ ಬಗೆಗೆ. |
| ತೀರ್ಮಾನ | ನೇಮಕಗೊಂಡಿರುವ 122 ತಾತ್ಕಾಲಿಕ ಅಧ್ಯಾಪಕೇತರ ಉದ್ಯೋಗಿಗಳ EPF & ESI ವಂತಿಕೆಗಳನ್ನು ನಿಯಮಾನುಸಾರ ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರ ಅಭಿಪ್ರಾಯದಂತೆ ಕಡಿತಗೊಳಿಸಲು ಸಿಂಡಿಕೇಟ್ ಅನುಮೋದಿಸಿತು. |
| 2018/5.23 | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Program ಅಡಿಯಲ್ಲಿ ಕೋರ್ಸುಗಳನ್ನು ನಡೆಸುತ್ತಿರುವ ಪೂಜಾ ಭಗವತ್ ಸ್ಮಾರಕ ಮಹಾಜನ ಶಿಕ್ಷಣ ಸಂಸ್ಥೆ, ಸ್ನಾತಕೋತ್ತರ ಕೇಂದ್ರ, ಮೈಸೂರು, ಇಲ್ಲಿ ಹೊಸ ಕೋರ್ಸುಗಳನ್ನು ಪ್ರಾರಂಭಿಸಲು Expert Committee ಯು ಭೇಟಿ ನೀಡಿ ಸಲ್ಲಿಸಿರುವ ವರದಿಯ ಅನುಮೋದನೆ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Programಅಡಿಯಲ್ಲಿ ಕೋರ್ಸುಗಳನ್ನು ನಡೆಸುತ್ತಿರುವ ಪೂಜಾ ಭಗವತ್ ಸ್ಮಾರಕ ಮಹಾಜನ ಶಿಕ್ಷಣ ಸಂಸ್ಥೆ, ಸ್ನಾತಕೋತ್ತರ ಕೇಂದ್ರ, ಮೈಸೂರು ಇಲ್ಲಿ (1) BBA (Tourism and Air Travel) (2) M.com. (5 year Integrated) (3) M.Com. (Business Information Systems) ಹೊಸ ಕೋರ್ಸುಗಳನ್ನು ಪ್ರಾರಂಭಿಸಲು Expert Committeeಯು ಭೇಟಿ ನೀಡಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| **2018/5.24** | ಮೂರು ಸಂಶೋಧನಾ ಅಭ್ಯರ್ಥಿಗಳು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| **ತೀರ್ಮಾನ** | ಶ್ರೀ ಡಿ.ಪಿ.ಉಮೇಶ, ಶ್ರೀ ಎನ್.ಜಿ.ಲೋಕೇಶ್ ಮತ್ತು ಶ್ರೀಮತಿ ಎ.ಎಸ್.ನಾಗರತ್ನ ಇವರಿಗೆ ರೂ. 20,000/-ಗಳ ದಂಡಶುಲ್ಕದೊಂದಿಗೆ ಸಂಶೋಧನಾ ಮಹಾಪ್ರಬಂಧವನ್ನು ಸಲ್ಲಿಸಲು ಸಿಂಡಿಕೇಟ್ ಅನುಮತಿ ನೀಡಿದ ದಿನಾಂಕದಿಂದ ಹೆಚ್ಚುವರಿಯಾಗಿ ಮೂರು ತಿಂಗಳು ಕಾಲಾವಕಾಶ ನೀಡಲು ಸಿಂಡಿಕೇಟ್ ಅನುಮೋದಿಸಿತು. |
| **2018/5.25** | ಮೌಲ್ಯಮಾಪಕರ ದಿನಭತ್ಯ ಮತ್ತು ಸಂಭಾವನೆ ಬಗ್ಗೆ. |
| **ತೀರ್ಮಾನ** | ಮೌಲ್ಯಮಾಪಕರ ದಿನಭತ್ಯೆ ಮತ್ತು ಸಂಭಾವನೆಯನ್ನು ಯಥಾಸ್ಥಿತಿಯಲ್ಲಿ ಮುಂದುವರೆಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/5.26** | ಬಿಜಿಎಸ್ ಶಿಕ್ಷಣ ಮಹಾವಿದ್ಯಾಲಯ, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲೂಕು, ಮಂಡ್ಯ ಜಿಲ್ಲೆ-ಈ ಶಿಕ್ಷಣ ಕಾಲೇಜನ್ನು 2018-19ನೇ ಶೈಕ್ಷಣಿಕ ಸಾಲಿನಿಂದ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಸುಪರ್ಧಿಗೆ ಹಸ್ತಾಂತರ ಮಾಡುವುದರ ಬಗ್ಗೆ. |
| **ತೀರ್ಮಾನ** | ಸರ್ಕಾರದ ಆದೇಶದಂತೆ ಬಿಜಿಎಸ್ ಶಿಕ್ಷಣ ಮಹಾವಿದ್ಯಾಲಯ, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲೂಕು, ಮಂಡ್ಯ ಜಿಲ್ಲೆ – ಶಿಕ್ಷಣ ಕಾಲೇಜನ್ನು 2018-19ನೇ ಶೈಕ್ಷಣಿಕ ಸಾಲಿನಿಂದ ಪ್ರಥಮ ಬಿ.ಇಡಿ. ಪದವಿಯ ಪ್ರವೇಶಾತಿಗೆ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಸಂಯೋಜನೆ ಪಡೆದು ಅದರ ಸುಪರ್ಧಿಗೆ ಹಸ್ತಾಂತರ ಮಾಡಬಹುದೆಂದು ಸಿಂಡಿಕೇಟ್ ತೀರ್ಮಾನಿಸಿತು. |
| **2018/5.27** | ಮೈಸೂರಿನ ಕ್ರಿಸ್ತ ಪ್ರಥಮ ದರ್ಜೆ ಕಾಲೇಜನ್ನು ಪ್ರಸ್ತುತ ಕಟ್ಟಡದಿಂದ ನೂತನ ಕಟ್ಟಡಕ್ಕೆ ಬದಲಾವಣೆ ಮಾಡಲು ಸಮಿತಿ ಪರಿಶೀಲನೆ ನಡೆಸಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ತಂದು ಅನುಮೋದನೆ ಪಡೆಯುವ ಬಗ್ಗೆ. |
| **ತೀರ್ಮಾನ** | ಮೈಸೂರಿನ ಕುವೆಂಪುನಗರದ ಅನಿಕೇತನರಸ್ತೆ, 3ನೇ ಕ್ರಾಸ್‌ನಲ್ಲಿರುವ ಕ್ರಿಸ್ತ ಪ್ರಥಮ ದರ್ಜೆ ಕಾಲೇಜನ್ನು ಪ್ರಸ್ತುತ ಕಟ್ಟಡದಿಂದ # 182/145/ಸಿ, ಬನ್ನೂರು ರಸ್ತೆ, ಸಿದ್ಧಾರ್ಥನಗರ ಮೈಸೂರು ಇಲ್ಲಿರುವ ನೂತನ ಕಟ್ಟಡಕ್ಕೆ ಬದಲಾವಣೆ ಮಾಡಲು ಸಮಿತಿ ಪರಿಶೀಲನೆ ನಡೆಸಿ ನಿಬಂಧನೆಗಳೊಂದಿಗೆ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2018/5.28** | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Programಗಳನ್ನು ನಡೆಸುತ್ತಿರುವSampoorna International Institute of Agri Sciences & Horticultural Technology, Channapatnaಸಂಸ್ಥೆಯ ವಿಳಾಸವನ್ನು ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆಗೆ ವಿಳಾಸ ಬದಲಾವಣೆ ಮಾಡಿರುವ ಕ್ರಮಕ್ಕೆ ಅನುಸಮರ್ಥನೆ ಕೋರಿ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Programಗಳನ್ನು ನಡೆಸುತ್ತಿರುವ Sampoorna International Institute of Agri Sciences & Horticultural Technology, Channapatna ಸಂಸ್ಥೆಯು ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆಗೆ ವಿಳಾಸ ಬದಲಾವಣೆಗೆ ಪರೀವೀಕ್ಷಣಾ ಸಮಿತಿಯ ವರದಿಯನ್ನಾಧರಿಸಿ ಅನುಮತಿ ನೀಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **2018/5.29** | B.Sc.(Honors) in Agricultural Science and Technology/ Horticultural Sciences and Technology ಪದವಿ ಕೋರ್ಸ್‌ಗೆ 2018-19ನೇ ಸಾಲಿಗೆ ಹೆಚ್ಚುವರಿಯಾಗಿ 60 ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಮತಿ ನೀಡುವ ಬಗ್ಗೆ. |

| | |
|---|---|
| ತೀರ್ಮಾನ | Sampoorna International Institute of Agri Sciences & Horticultural Technology, Channapatnaಇವರಿಗೆ B.Sc.(Honors) in Agricultural Science and Technology/ Horticultural Sciences and Technology ಪದವಿ ಕೋರ್ಸ್‌ಗೆ 2018-19ನೇ ಸಾಲಿಗೆ ಸಮಿತಿಯ ಶಿಫಾರಸ್ಸಿನಂತೆ ಹೆಚ್ಚುವರಿಯಾಗಿ 60 ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಮತಿ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2018/5.30 | Adichunchanagiri Institute for Molelcular Medicine, B.G. Nagar, Nagamangala Mandya, ಸಂಸ್ಥೆಯ ಸಂಶೋಧನ ಕೇಂದ್ರದ ಮಾನ್ಯತೆಯನ್ನು ಸ್ಥಗಿತಗೊಳಿಸುವ ಬಗೆಗೆ. |
| ತೀರ್ಮಾನ | Adichunchanagiri Institute for Molelcular Medicine, B.G. Nagar, Nagamangala Mandya ಸಂಸ್ಥೆಯು ಹೊಸದಾಗಿ Adichunchanagiri University (ACU) ಪ್ರಾರಂಭವಾಗುತ್ತಿರುವುದರಿಂದ ಸದರಿ ವಿಶ್ವವಿದ್ಯಾನಿಲಯದ ಸಂಶೋಧನ ಕೇಂದ್ರದ ಮಾನ್ಯತೆಯನ್ನು ಪಡೆಯಲು ಉದ್ದೇಶಿಸಿರುವುದರಿಮದ ಮೈಸೂರು ವಿಶ್ವವಿದ್ಯಾನಿಲಯದಿಂದ ಪಡೆದಿರುವ ಸಂಶೋಧನ ಕೇಂದ್ರದ ಮಾನ್ಯತೆಯನ್ನು 2018-19ನೇ ಸಾಲಿನಿಂದ ಸ್ಥಗಿತಗೊಳಿಸಲು ಸಿಂಡಿಕೇಟ್ ಅನುಮೋದಿಸಿತು. |
| 2018/5.31 | Wings Creations Pvt. Ltd., ಸಂಸ್ಥೆಯ ವಿಳಾಸ ಬದಲಾವಣೆಗೆ ಅವಕಾಶ ಕಲ್ಪಿಸಿರುವ ಬಗ್ಗೆ ಅನುಸಮರ್ಥನೆ ಕೋರಿ. |
| ತೀರ್ಮಾನ | Wings Creations Pvt. Ltd., 5th Cross, 6th Block, Above Raymond Show Room Next to Anand Sweets, Koramangala, Bangalore – 560 095 ಸಂಸ್ಥೆಯ ಈಗಿರುವ ವಿಳಾಸದಿಂದ Wings Creations Pvt. Ltd., #148, 2nd Floor, Sri Manju Complex, KHB Colony, 17th E Main, 5th Block, Koramangala, (Next to Anand Sweets above Raymond Show Room) Bangalore – 560 095 ಎಂಬುದಾಗಿ ಪೂರ್ಣ ವಿಳಾಸದ ಬದಲಾವಣೆಗೆ ಅವಕಾಶ ಕಲ್ಪಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2018/5.32 | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Program ಗಳನ್ನು ನಡೆಸುತ್ತಿರುವ Cavalier Animation & Technologies Pvt. Ltd., ಸಂಸ್ಥೆಯ ವಿಳಾಸವನ್ನು ಮೈಸೂರಿಗೆ ಬದಲಾವಣೆ ಮಾಡುವ ಸಂಬಂಧ ಪರಿಶೀಲನಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Programಗಳನ್ನು ನಡೆಸುತ್ತಿರುವ Cavalier Animation & Technologies Pvt. Ltd., Bengaluru ಸಂಸ್ಥೆಯನ್ನು Cavalier Animation & Technologies Pvt. Ltd., No. 297/1, Hari Lakshmi Towers, Behind Sadvidya High School Lakshmi Vilas Road, Mysore-570 001 ವಿಳಾಸಕ್ಕೆ ಬದಲಾವಣೆ ಮಾಡುವ ಸಂಬಂಧ ಪರಿಶೀಲನಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| 2018/5.33 | Hindustan Educational and Charitable Trust, J.P. Nagar, Mysuru ಸಂಸ್ಥೆಯಲ್ಲಿ Specialized Program ಅಡಿಯಲ್ಲಿ ಕೋರ್ಸುಗಳನ್ನು ನಡೆಸಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | Hindustan Educational and Charitable Trust, J.P. Nagar, Mysuru ಸಂಸ್ಥೆಯಲ್ಲಿ Specialized Program ಅಡಿಯಲ್ಲಿ 40 ವಿದ್ಯಾರ್ಥಿಗಳ ಸಂಖ್ಯಾಮಿತಿಯೊಂದಿಗೆ (1) B.B.A. Aviation Management (2) B.Sc. Fashion Designing ಕೋರ್ಸುಗಳನ್ನು ನಡೆಸಲು ಪರಿಶೀಲನಾ ಸಮಿತಿಯು ನೀಡಿರುವ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |
| 2018/5.34 | ICARE, West Bengal ಸಂಸ್ಥೆಗೆ ಕಾನೂನು ವಿಷಯದಲ್ಲಿ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಬಗ್ಗೆ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ಶಿಫಾರಸ್ಸಿಗೆ ಅನುಮೋದನೆ ಕೋರಿ. |
| ತೀರ್ಮಾನ | ಪರಿವೀಕ್ಷಣಾ ಸಮಿತಿಯ ವರದಿಯನ್ನು ಆಧರಿಸಿ, Indian Centre for Advancement of Research and Education (ICARE), ICARE Complex, HIT campus, P.O.Hatiberia, Haldia, Dist. Purba Medinipur, West Bengal ಸಂಸ್ಥೆಗೆ ಕಾನೂನು ವಿಷಯದಲ್ಲಿ ಮಾತ್ರ 2018-19ನೇ ಸಾಲಿಗೆ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2018/5.35 | ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ಹೊಸದಾಗಿ ಸ್ವಾಯತ್ತತಾ ಸ್ಥಾನಮಾನ ನೀಡುವ ಬಗೆಗೆ. |
| ತೀರ್ಮಾನ | ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ಹೊಸದಾಗಿ ಸ್ವಾಯತ್ತತಾ ಸ್ಥಾನಮಾನವನ್ನು ಪರಿವೀಕ್ಷಣಾ ಸಮಿತಿಯು ತನ್ನ ವರದಿಯಲ್ಲಿ ವಿಧಿಸಿರುವ ಷರತ್ತುಗಳನ್ನು ಪೂರೈಸುವ ನಿಬಂಧನೆಯೊಂದಿಗೆ 2018-19 ಶೈಕ್ಷಣಿಕ ಸಾಲಿನಿಂದ ಸ್ವಾಯತ್ತತೆಯನ್ನು ನೀಡಲು ತೀಮಾನಿಸಿತು. |
| 2018/5.36 | Lisaa School of Design ಸಂಸ್ಥೆಯ ವಿಳಾಸ ಬದಲಾವಣೆಗೆ ಅನುಮತಿ ನೀಡುವ ಬಗ್ಗೆ. |
| Decision | The Syndicate approved the recommendations of the Committee relating to shifting of Lisaa School of Design to the new building located at Lisaa School of Design, 30, Laskar Hosur Road, Opp. Adugodi Police Station, Koramangala, Bangalore 560 030. |
| 2018/5.37 | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Program Dalai Lama Institute for Higher Education, ರಾಮನಗರ, ಬೆಂಗಳೂರು ಸಂಸ್ಥೆಯ ವಿಳಾಸವನ್ನು Bylakuppe, Mysore Dist.ಗೆ ಬದಲಾವಣೆ ಮಾಡುವ ಸಂಬಂಧ ತಜ್ಞರ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Program Dalai Lama Institute for Higher Education, ರಾಮನಗರ, ಬೆಂಗಳೂರು ಸಂಸ್ಥೆಯ ವಿಳಾಸವನ್ನು Bylakuppe, Mysore Dist.ಗೆ ಬದಲಾವಣೆ ಮಾಡುವ ಸಂಬಂಧ ತಜ್ಞರ ಸಮಿತಿಯು ಸಲ್ಲಿಸಿರುವ ವರದಿಯನ್ನು ಅನುಮೋದಿಸಿ ವರದಿಯಾನುಸಾರ ಕ್ರಮಕೈಗೊಳ್ಳುವಂತೆ ಸಿಂಡಿಕೇಟ್ ತೀರ್ಮಾನಿಸಿತು. |
| 2018/5.38 | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು ಸಂಶೋಧನಾ ಕಾರ್ಯ ನಡೆಸುತ್ತಿರುವ Dalai Lama Institute for Higher Education, ರಾಮನಗರ, ಬೆಂಗಳೂರು ಸಂಸ್ಥೆಯ ವಿಳಾಸವನ್ನು Bylakuppe, Mysore Dist. ಗೆ ಬದಲಾವಣೆ ಮಾಡುವ ಸಂಬಂಧ ತಜ್ಞರ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |

| | |
|---|---|
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು ಸಂಶೋಧನಾ ಕಾರ್ಯ ನಡೆಸುತ್ತಿರುವ Dalai Lama Institute for Higher Education, ರಾಮನಗರ, ಬೆಂಗಳೂರು ಸಂಸ್ಥೆಯ ವಿಳಾಸವನ್ನು Bylakuppe, Mysore Dist.ಗೆ ಬದಲಾವಣೆ ಮಾಡುವ ಸಂಬಂಧ ತಜ್ಞರ ಸಮಿತಿಯು ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/5.39** | Maharaja Aviation Academy, Mandya ಸಂಸ್ಥೆಯಲ್ಲಿ Specialized Program ಅಡಿಯಲ್ಲಿ ಹೊಸದಾಗಿ ಕೋರ್ಸುಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ, |
| ತೀರ್ಮಾನ | Maharaja Aviation Academy, Mandya ಸಂಸ್ಥೆಯಲ್ಲಿ Specialized Programನ ನಿಯಮದಡಿಯಲ್ಲಿ ಸಮಿತಿಯ ವರದಿಯನ್ನಾಧರಿಸಿ 40 ವಿದ್ಯಾರ್ಥಿಗಳ ಪ್ರವೇಶಮಿತಿಯೊಂದಿಗೆ (1)B.Sc., (Aviation) (2) B.B.A. (Aviation Hospitality and Tourism) ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲು ಸಿಂಡಿಕೇಟ್ ಅನುಮೋದಿಸಿತು. |
| **2018/5.40** | ಶ್ರೀ ಪ್ರಸಾದಮೂರ್ತಿ.ಜಿ, ಸಂಶೋಧನಾ ಅಭ್ಯರ್ಥಿ, ಇವರು ಹೆಚ್ಚುವರಿ ಸಂಶೋಧನಾ ಅವಧಿ ಕೋರಿರುವ ಬಗ್ಗೆ. |
| ತೀರ್ಮಾನ | ಶ್ರೀ ಪ್ರಸಾದಮೂರ್ತಿ.ಜಿ, ಸಂಶೋಧನಾ ಅಭ್ಯರ್ಥಿ, ಇವರಿಗೆ ರೂ. 20,000/-ಗಳ ದಂಡಶುಲ್ಕದೊಂದಿಗೆ ಸಂಶೋಧನಾ ಮಹಾಪ್ರಬಂಧವನ್ನು ಸಲ್ಲಿಸಲು ಸಿಂಡಿಕೇಟ್ ಅನುಮತಿ ನೀಡಿದ ದಿನಾಂಕದಿಂದ ಹೆಚ್ಚುವರಿಯಾಗಿ ಮೂರು ತಿಂಗಳು ಕಾಲಾವಕಾಶ ನೀಡಲು ಸಿಂಡಿಕೇಟ್ ಅನುಮೋದಿಸಿತು. |
| **2018/5.41** | ಡಾ. ಅರವಿಂದ ಮಾಲಗತ್ತಿ, ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಹಾಗೂ ಡಾ.ಮಹೇಶ್ ಚಂದ್ರ ಗುರು, ಪ್ರಾಧ್ಯಾಪಕರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರುಗಳನ್ನು ಸೇವೆಯಿಂದ ಅಮಾನತ್ತು ಮಾಡಿರುವ ಬಗ್ಗೆ ಹಾಗೂ ಈ ಪ್ರಕರಣದ ಸಂಬಂಧ ಸಿದ್ಧಪಡಿಸಿರುವ ಕರಡು ಆರೋಪಣಾ ಪಟ್ಟಿ. |
| ತೀರ್ಮಾನ | ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಡಾ. ಅರವಿಂದ ಮಾಲಗತ್ತಿ, ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಹಾಗೂ ಡಾ. ಮಹೇಶ್‌ಚಂದ್ರ ಗುರು, ಪ್ರಾಧ್ಯಾಪಕರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರುಗಳನ್ನು ಸೇವೆಯಿಂದ ಅಮಾನತ್ತುಗೊಳಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು.<br>ಮುಂದುವರೆದು, ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಈ ಪ್ರಾಧ್ಯಾಪಕರುಗಳನ್ನು ಅಮಾನತ್ತುಗೊಳಿಸಿರುವುದನ್ನು ರದ್ದುಗೊಳಿಸಿ ಮರುನೇಮಕಗೊಳಿಸಲು ತೀರ್ಮಾನಿಸಿತುಹಾಗೂ ಮಂಡಿಸಲಾಗಿರುವ ಆರೋಪಪಟ್ಟಿಗಳನ್ನು ಅನುಮೋದಿಸಿದ ಸಿಂಡಿಕೇಟ್ ಶ್ರೀ ಹೆಚ್.ಎಸ್.ರಾಮಣ್ಣ, ಕಾನೂನು ಸಲಹೆಗಾರರು, ಮೈಸೂರು ವಿಶ್ವವಿದ್ಯಾನಿಲಯ ಅವರನ್ನು ವಿಚಾರಣಾ ಅಧಿಕಾರಿಯನ್ನಾಗಿ ಹಾಗೂ ಶ್ರೀ ಬಿ.ಪ್ರಕಾಶ್, ಸಹಾಯಕ ಕುಲಸಚಿವ(ಸಿಬ್ಬಂದಿ), ಆಡಳಿತಶಾಖೆ ಅವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/5.42** | European Education Commission ವತಿಯಿಂದ ನೆಟ್‌ವರ್ಕ್ ಯೋಜನೆ ಕೈಗೊಳ್ಳುವ ಬಗ್ಗೆ. |

| | |
|---|---|
| ತೀರ್ಮಾನ | European Education Commission ವತಿಯಿಂದ ನೆಟ್‌ವರ್ಕ್ ಯೋಜನೆ ಕೈಗೊಳ್ಳುವುದನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/5.43** | ವಿಶ್ವವಿದ್ಯಾನಿಲಯದಲ್ಲಿ ಸೇವೆಯಲ್ಲಿರುವಾಗಲೇ ನಿಧನರಾದ ಉದ್ಯೋಗಿಯ ಕುಟುಂಬದ ಅವಲಂಬಿತರೊಬ್ಬರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಅಧಿನಿಯಮ ಮತ್ತು ಸರ್ಕಾರಿ ನಿಯಮಗಳ ಪ್ರಕಾರ ಸೇವೆಯಲ್ಲಿರುವಾಗಲೇ ನಿಧನರಾದ ದಿವಂಗತ ಶ್ರೀ ಎಸ್.ಟಿ.ರಾಜೇಂದ್ರ, ನಿಲಯ ಸಹಾಯಕರು, ವಿಶ್ವವಿದ್ಯಾನಿಲಯ ವಿದ್ಯಾರ್ಥಿನಿಲಯ-2, ಸರಸ್ವತಿಪುರಂ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಕುಟುಂಬದ ಅವಲಂಬಿತರೊಬ್ಬರಿಗೆ ಅಂದರೆ ಮೃತರ ಪತ್ನಿ ಶ್ರೀಮತಿ ಪಿ. ಅಂಜು ಇವರಿಗೆ ಅನುಕಂಪದ ಆಧಾರದ ಮೇಲೆ ವಿದ್ಯಾರ್ಥಿ ನಿಲಯದಲ್ಲಿ ಖಾಲಿ ಇರುವ ನಿಲಯ ಸಹಾಯಕರ ಹುದ್ದೆಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/5.44** | ಶ್ರೀ ಗಣೇಶ್, ನಿಲಯ ಸಹಾಯಕ, ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ, ಬ್ಲಾಕ್-02, ಮಾನಸಗಂಗೋತ್ರಿ, ಮೈಸೂರು ಇವರನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ಬಗ್ಗೆ. |
| ತೀರ್ಮಾನ | ಶ್ರೀ ಗಣೇಶ್, ನಿಲಯ ಸಹಾಯಕ, ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ, ಬ್ಲಾಕ್-02, ಮಾನಸಗಂಗೋತ್ರಿ, ಮೈಸೂರು ಇವರನ್ನು ಕೆ.ಸಿ.ಎಸ್.ಆರ್. ನಿಯಮಗಳನ್ವಯ ವಿಶ್ವವಿದ್ಯಾನಿಲಯದ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/5.45** | ಪ್ರೊ. ಶಿವಬಸವಯ್ಯ, ನಿರ್ದೇಶಕರು, ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಚಾಮರಾಜನಗರ ಇವರಿಗೆ ಹೆಚ್ಚುವರಿ ಮನೆ ಬಾಡಿಗೆ ಭತ್ಯೆ ಪಾವತಿಸಿರುವ ಬಗ್ಗೆ. |
| ತೀರ್ಮಾನ | ಪ್ರೊ. ಶಿವಬಸವಯ್ಯ, ನಿರ್ದೇಶಕರು, ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಚಾಮರಾಜನಗರ ಇವರು ಪ್ರತಿನಿತ್ಯ ಮೈಸೂರಿನಿಂದ ಕೇಂದ್ರಕ್ಕೆ ಪ್ರಯಾಣಿಸುತ್ತಿರುವುದರಿಂದ ಹಾಗೂ ಅವರ ನೇಮಕಾತಿಯು ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಆಗಿರುವುದರಿಂದ ಮೈಸೂರು ನಗರದ ದರದಲ್ಲಿ ಅಂದರೆ ಶೇ. 20ರಂತೆ ಮನೆ ಬಾಡಿಗೆ ಭತ್ಯೆಯನ್ನು ಪಡೆಯುತ್ತಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/5.46** | ವಿಶ್ವವಿದ್ಯಾನಿಲಯ ಅತಿಥಿ ಉಪನ್ಯಾಸಕರ ಸಂಬಂಧ ದೂರುಗಳ ಹಾಗೂ ಆರೋಪಗಳ ಬಗ್ಗೆ. |
| ತೀರ್ಮಾನ | ಆರೋಪವಿರುವ ಪ್ರಸ್ತಾವನೆಯಲ್ಲಿನ ಅತಿಥಿ ಉಪನ್ಯಾಸಕರನ್ನು ವಿಶ್ವವಿದ್ಯಾನಿಲಯದ ಆಡಳಿತ ಹಾಗೂ ಶೈಕ್ಷಣಿಕ ಹಿತದೃಷ್ಟಿಯಿಂದ 2018-19ನೇ ಸಾಲಿನಿಂದ ಅತಿಥಿ ಉಪನ್ಯಾಸಕರಾಗಿ ಆಹ್ವಾನಿಸದಿರಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/5.47** | ಡಾ. ಮನ್ಸೂರ್ ಅಹಮದ್, ಕ್ರಿಕೇಟ್ ತರಬೇತುದಾರರು, ದೈಹಿಕ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರು ಸೌದಿ ಅರೇಬಿಯಾದ ಮೆಕ್ಕಾ ಮತ್ತು ಮದೀನಾ ಪವಿತ್ರ ಯಾತ್ರೆಗೆ ಹೋಗಲು ಅನುಮತಿಸಿರುವ ಬಗ್ಗೆ. |
| ತೀರ್ಮಾನ | ಡಾ.ಮನ್ಸೂರ್ ಅಹಮದ್, ಕ್ರಿಕೇಟ್ ತರಬೇತುದಾರರು, ದೈಹಿಕ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರು ಸೌದಿ ಅರೇಬಿಯಾದ ಮೆಕ್ಕಾ ಮತ್ತು ಮದೀನಾ ಪವಿತ್ರ ಯಾತ್ರೆಗೆ ದಿನಾಂಕ 14-05-2018ರಿಂದ 28-05-2018ರ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ವತಿಯಿಂದ ಯಾವ ಆರ್ಥಿಕ ಹೊಣೆಗಾರಿಕೆಯೂ ಇಲ್ಲದಂತೆ ಹೋಗಲು ಅನುಮತಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |

| | |
|---|---|
| **2018/5.48** | ಡಾ. ಕೆ.ಬಿ.ಪ್ರವೀಣ್, ಸಹಾಯಕ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು. ಇವರನ್ನು ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ಕಛೇರಿಯ ಕಾರ್ಯಭಾರವನ್ನು ಹೆಚ್ಚುವರಿಯಾಗಿ ನಿರ್ವಹಿಸಲು ನಿಯೋಜಿಸಿರುವುದು. |
| **ತೀರ್ಮಾನ** | ಡಾ.ಕೆ.ಬಿ.ಪ್ರವೀಣ್, ಸಹಾಯಕ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು. ಇವರನ್ನು ನಿರ್ದೇಶಕರನ್ನಾಗಿ ವಿದ್ಯಾರ್ಥಿ ಕ್ಷೇಮಪಾಲನಾ ಕಛೇರಿಯ ಕಾರ್ಯಭಾರವನ್ನು ಹೆಚ್ಚುವರಿಯಾಗಿ ನಿರ್ವಹಿಸಲು ನಿಯೋಜಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/5.49** | ಡಾ. ಡಿ.ಪಿ.ಮಧುಸೂದನ್, ಸಹಾಯಕ ಸಂಶೋಧಕ, ಪ್ರಾಚ್ಯವಿದ್ಯಾಸಂಶೋಧನಾಲಯ, ಮೈಸೂರು ಇವರನ್ನು ಶ್ರೀವ್ಯಾಸರಾಜ ಸಂಶೋಧನಾ ಮಂದಿರ, ಬೆಂಗಳೂರು, ಇಲ್ಲಿಗೆ ಗೌರವ ನಿರ್ದೇಶಕರಾಗಿ ನಿಯೋಜಿಸಿರುವ ಬಗ್ಗೆ. |
| **ತೀರ್ಮಾನ** | ಡಾ. ಡಿ.ಪಿ.ಮಧುಸೂದನ್, ಸಹಾಯಕ ಸಂಶೋಧಕ, ಪ್ರಾಚ್ಯ ವಿದ್ಯಾಸಂಶೋಧನಾಲಯ, ಮೈಸೂರು ಇವರನ್ನು ಶ್ರೀವ್ಯಾಸರಾಜ ಸಂಶೋಧನಾ ಮಂದಿರ, ಬೆಂಗಳೂರು, ಇಲ್ಲಿಗೆ ಗೌರವ ನಿರ್ದೇಶಕರಾಗಿ ಷರತ್ತಿನ ಮೇಲೆ ಎರಡು ವರ್ಷಗಳ ಅವಧಿಗೆ ನಿಯೋಜಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **2018/5.50** | 2018–19ನೇ ಶೈಕ್ಷಣಿಕ ವರ್ಷಕ್ಕೆ ಸ್ಥಳೀಯ ತನಿಖಾ ಸಮಿತಿಯು ನೀಡಿರುವ ಸಂಯೋಜನಾ ವರದಿಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗೆಗೆ. |
| **ತೀರ್ಮಾನ** | 2018–19ನೇ ಶೈಕ್ಷಣಿಕ ಸಾಲಿಗೆ ಹಾಲಿ ಅಸ್ತಿತ್ವದಲ್ಲಿರುವ ಪ್ರಥಮ ದರ್ಜೆ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಸಲು/ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸ ಕೋರ್ಸುಗಳು/ವಿಷಯಗಳು/ ಕಾಂಬಿನೇಷನ್‌ಗಳನ್ನು ಪ್ರಾರಂಭಿಸಲು/ ನವೀಕರಿಸಲು ಹಾಗೂ ಹಾಲಿ ಇರುವ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶಾಶ್ವತ ಸಂಯೋಜನೆ ಕೋರಿರುವ ಕೋರ್ಸುಗಳಿಗೆ ಹೊಸದಾಗಿ ಶಾಶ್ವತ ಸಂಯೋಜನೆ ನೀಡಲು / ಶಿಕ್ಷಣ ಕಾಲೇಜುಗಳಿಗೆ ಸಂಯೋಜನೆ ಮುಂದುವರೆಸಲು / ಹೊಸ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು, ಹಾಲಿ ಇರುವ ಕಾಲೇಜುಗಳಲ್ಲಿ ಅಸ್ತಿತ್ವದಲ್ಲಿರುವ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆ ಮುಂದುವರೆಸಲು, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಮತ್ತು ಯು.ಜಿ.ಸಿ. ಆ್ಯಡ್ ಆನ್ ಕೋರ್ಸುಗಳನ್ನು ಮುಂದುವರಿಸಲು / ಹೊಸದಾಗಿ ಸಂಯೋಜನೆ ನೀಡಲು / ಹಾಲಿ ಅಸ್ತಿತ್ವದಲ್ಲಿರುವ ಕೋರ್ಸುಗಳಿಗೆ ಪ್ರವೇಶಾತಿ ಸಂಖ್ಯೆಯನ್ನು ಹೆಚ್ಚಿಸುವ ಬಗೆಗೆ ಸ್ಥಳೀಯ ವಿಚಾರಣಾ ಸಮಿತಿಯವರು ಸಲ್ಲಿಸಿರುವ ವರದಿಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2018/5.51** | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸುಗಳು |
| **ತೀರ್ಮಾನ** | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸುಗಳನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/5.52** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ National Academic Depository (NAD) ಅನ್ನು ಅಳವಡಿಸಿಕೊಳ್ಳುವ ಬಗ್ಗೆ. |
| **ತೀರ್ಮಾನ** | ಮುಂದೂಡಲಾಯಿತು. |

| | |
|---|---|
| 2018/5.53 | ಒಂದು ವರ್ಷದ M.Ed., SPL.Ed(HI) ಕೋರ್ಸಿನ ವ್ಯಾಸಂಗವನ್ನು ಎರಡು ವರ್ಷಗಳಿಗೆ ವಿಸ್ತರಿಸಿರುವ ಸಂಬಂಧ ವಿನಿಯಮಾವಳಿಗೆ ಅನುಮೋದನೆ ಪಡೆಯುವ ಬಗ್ಗೆ. |
| ತೀರ್ಮಾನ | ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ಇವರು ವಿಶ್ವವಿದ್ಯಾನಿಲಯಕ್ಕೆ ಮಾನ್ಯ ಕುಲಾಧಿಪತಿಗಳ ಅಂಕಿತ ದೊರಕಿಸಿಕೊಡುವ ಸಲುವಾಗಿ ಸಲ್ಲಿಸಲಾಗಿರುವ ಒಂದು ವರ್ಷದ M.Ed.,SPL.Ed(HI) ಕೋರ್ಸಿನ ವ್ಯಾಸಂಗವನ್ನು ಎರಡು ವರ್ಷಗಳಿಗೆ ವಿಸ್ತರಿಸಿರುವ ಸಂಬಂಧ ವಿನಿಯಮಾವಳಿಗಳನ್ನು ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ಅನುಮೋದಿಸಿತು. |
| 2018/5.54 | 2018–19ನೇ ಶೈಕ್ಷಣಿಕ ಸಾಲಿನಿಂದ ಎಲ್ಲಾ ಸ್ನಾತಕ ವಿಷಯಗಳಲ್ಲಿ CBCS-CAGP ಪದ್ಧತಿಯನ್ನು ಅಳವಡಿಸಿಕೊಳ್ಳುವ ಬಗೆಗೆ. |
| ತೀರ್ಮಾನ | ಕುಲಾಧಿಪತಿಗಳ ಅನುಮೋದನೆಯನ್ನು ಕಾಯ್ದಿರಿಸಿ 2018–19ನೇ ಶೈಕ್ಷಣಿಕ ಸಾಲಿನಿಂದ ಎಲ್ಲಾ ಸ್ನಾತಕ ವಿಷಯಗಳಲ್ಲಿ CBCS-CAGP ಪದ್ಧತಿಯನ್ನು ಅಳವಡಿಸಿಕೊಳ್ಳಲು ಈಗಾಗಲೇ ಪ್ರಕಟಣೆ ಹೊರಡಿಸಲಾಗಿರುವುದನ್ನು ಅನುಸಮರ್ಥಿಸಿ ಈ ಸಂಬಂಧದ ಕರಡು ವಿನಿಯಾಮವಳಿಯನ್ನು ಕುಲಾಧಿಪತಿಗಳ ಅಂಕಿತ ಪಡೆದುಕೊಳ್ಳುವ ಸಲುವಾಗಿ ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| 2018/5.55 | ಸ್ನಾತಕೋತ್ತರ ಕೋರ್ಸ್‌ಗಳ 2018–19ನೇ ಸಾಲಿನ ಪ್ರವೇಶಾತಿಗೆ ಅಂತರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಂಖ್ಯೆ ಮಿತಿಯನ್ನು ಸಡಿಲಗೊಳಿಸುವ ಬಗ್ಗೆ. |
| ತೀರ್ಮಾನ | ಸ್ನಾತಕೋತ್ತರ ಕೋರ್ಸ್‌ಗಳ 2018–19ನೇ ಸಾಲಿನ ಪ್ರವೇಶಾತಿಗೆ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಈಗಿರುವ ಪ್ರವೇಶಾತಿ ಸಂಖ್ಯೆ ಮಿತಿಯನ್ನು ಸಡಿಲಗೊಳಿಸುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2018/5.56 | ದಿನಾಂಕ: 22–05–2018ರಂದು ನಡೆದ 2017–18ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ ಸಭೆಯ ನಿರ್ಣಯಗಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವ ಬಗ್ಗೆ. |
| ತೀರ್ಮಾನ | ದಿನಾಂಕ: 22–05–2018ರಂದು ನಡೆದ 2017–18ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ ಸಭೆಯ ನಿರ್ಣಯಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 2018/5.57 | ಎರಡು ಹೊಸ ವಾಹನಗಳನ್ನು ಖರೀದಿಸುವ ಬಗ್ಗೆ. |
| ತೀರ್ಮಾನ | ಬಳಕೆಗೆ ಯೋಗ್ಯವಿಲ್ಲದ ಒಟ್ಟು ಎರಡು ಹಳೆಯ ವಾಹನಗಳನ್ನು ನಿಯಮಾನುಸಾರ ವಿಲೇವಾರಿ ಮಾಡಲು ಹಾಗೂ ಒಂದು Car 4+1 Seater (Seadan/Compact Seadan) ಮತ್ತೊಂದು ವಾಹನ 6+1 Seater (MUV) ಒಟ್ಟು ಎರಡು ಹೊಸ ವಾಹನಗಳನ್ನು ಖರೀದಿಸಲು ಸಿಂಡಿಕೇಟ್ ಅನುಮೋದಿಸಿತು. |
| 2018/5.58 | ಶ್ರೀ ಎನ್.ರಾಚಯ್ಯ ಅಧ್ಯಯನ ಪೀಠದ 2018–19ನೇ ಸಾಲಿನ ವಾರ್ಷಿಕ ಅಂದಾಜು ಪಟ್ಟಿಯನ್ನು ಮತ್ತು ಸಂದರ್ಶಕ ಪ್ರಾಧ್ಯಾಪಕರನ್ನು ಒಂದು ವರ್ಷದ ಅವಧಿಗೆ ನೇಮಕಾತಿ ಬಗ್ಗೆ. |
| ತೀರ್ಮಾನ | ಶ್ರೀ ಎನ್.ರಾಚಯ್ಯ ಅಧ್ಯಯನ ಪೀಠಕ್ಕೆ ಸಂಬಂಧಿಸಿದ 2018–19ನೇ ಸಾಲಿನ ವಾರ್ಷಿಕ ಅಂದಾಜು ಪಟ್ಟಿಯನ್ನು ಅನುಮೋದಿಸಿದ ಸಿಂಡಿಕೇಟ್ ಪ್ರೊ. ಹೆಚ್.ಎಂ.ರಾಜಶೇಖರ, ನಿವೃತ್ತ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರನ್ನು ಒಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಕಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| 2018/5.59 | ಪ್ರವೇಶಾತಿ ಅನುಮೋದನೆ ನೀಡುವ ಬಗ್ಗೆ. |
| ತೀರ್ಮಾನ | Ramaiah Institute of Management Studies, Bangalore ಶಿಕ್ಷಣ ಸಂಸ್ಥೆಗೆ ಒಟ್ಟು 203 ವಿದ್ಯಾರ್ಥಿಗಳಿಗೆ ಅನುಮೋದನೆ ನೀಡಲಾಗಿದ್ದು ಇವರಲ್ಲಿ 133 ವಿದ್ಯಾರ್ಥಿಗಳಿಗೆ ಮಾತ್ರ ಸದರಿ ಸಂಸ್ಥೆಯವರು ಪ್ರವೇಶಾತಿ ಶುಲ್ಕವನ್ನು ಪಾವತಿಸಿರುವುದನ್ನು ಗಮನಿಸಿದ ಸಿಂಡಿಕೇಟ್ 2017-18ನೇ ಸಾಲಿಗೆ ಉಳಿದ 70 ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕವನ್ನು ದಂಡಶುಲ್ಕದೊಂದಿಗೆ ಪಾವತಿಸಿಕೊಂಡು ಪ್ರವೇಶಾತಿ ಅನುಮೋದಿಸಲು ಮತ್ತು ಈ 70 ವಿದ್ಯಾರ್ಥಿಗಳಿಗೆ ಅವರುಗಳ ಭವಿಷ್ಯದ ಹಿತದೃಷ್ಟಿಯಿಂದ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ಪರೀಕ್ಷಾಶುಲ್ಕ, ದಂಡಶುಲ್ಕ, ಹಾಗೂ ಪರೀಕ್ಷೆ ನಡೆಸಲು ತಗುಲುವ ವೆಚ್ಚವನ್ನು ಸಂಸ್ಥೆಯಿಂದ ಭರಿಸಿಕೊಂಡು 1ನೇ ಮತ್ತು 2ನೇ ಸೆಮಿಸ್ಟರ್ ಪರೀಕ್ಷೆಗಳನ್ನು 2018-19ರ 3ನೇ ಸೆಮೆಸ್ಟರ್ ಪರೀಕ್ಷೆಗೆ ಮುಂಚೆ ಪ್ರತ್ಯೇಕವಾಗಿ ನಡೆಸಲು ಮತ್ತು ಈ ವಿದ್ಯಾರ್ಥಿಗಳ 3ನೇ ಮತ್ತು 4ನೇ ಸೆಮಿಸ್ಟರ್ ಪರೀಕ್ಷೆಗಳನ್ನು 133 ವಿದ್ಯಾರ್ಥಿಗಳ ಜೊತೆಯಲ್ಲೆ ನಡೆಸಲು ನಿಯಮಾನುಸಾರ ಅಗತ್ಯಕ್ರಮ ವಹಿಸುವಂತೆ ಸಿಂಡಿಕೇಟ್ ಅನುಮೋದಿಸಿತು. |
| 2018/5.60 | ಸಿಂಡಿಕೇಟ್ ಸದಸ್ಯರುಗಳಾದ ಪ್ರೊ. ಡಿ. ನಂಜುಂಡಯ್ಯ, ಶ್ರೀ ಲಯನ್ ಹೆಚ್. ರಮೇಶ್ ಮತ್ತು ಶ್ರೀ ಮಹಮ್ಮದ್ ಅಬ್ದುಸ್ ಸಲಾಂ ಅವರುಗಳು ಸಲ್ಲಿಸಿರುವ ಪ್ರಸ್ತಾವನೆಯ ಬಗ್ಗೆ. |
| ತೀರ್ಮಾನ | ಫಲಿತಾಂಶ ಪ್ರಕಟವಾಗುವವರೆಗೆ ಯಥಾಸ್ಥಿತಿ ಕಾಪಾಡಿಕೊಂಡು ಪ್ರಸ್ತಾವನೆಯನ್ನು ಮುಂದೂಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2018/5.61 | ಡಾ. ವಿಶ್ವನಾಥ, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರು ಯುಜಿಸಿ ಪ್ರಕಟಣೆ ಹೊರಡಿಸಿರುವ Joint Secretary ಹುದ್ದೆಗೆ ಅರ್ಜಿಯನ್ನು ಸಲ್ಲಿಸಿರುವ ಸಂಬಂಧ Deputation ಆಧಾರದ ಮೇಲೆ ಸೇವೆ ಸಲ್ಲಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಬೇಕೆಂದು ಕೋರಿರುವ ಬಗ್ಗೆ. |
| ತೀರ್ಮಾನ | ಡಾ. ವಿಶ್ವನಾಥ, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರು ಯುಜಿಸಿ ಪ್ರಕಟಣೆ ಹೊರಡಿಸಿರುವ Joint Secretary ಹುದ್ದೆಗೆ ಅರ್ಜಿಯನ್ನು ಸಲ್ಲಿಸಿರುವ ಸಂಬಂಧ Deputation ಆಧಾರದ ಮೇಲೆ ಸೇವೆ ಸಲ್ಲಿಸಲು ನಿಯಮಗಳಾನುಸಾರ ನಿರಾಕ್ಷೇಪಣಾ ಪತ್ರವನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2018/5.62 | ಶ್ರೀ ಕಪಿಲನ್, ವಾಹನ ಚಾಲಕ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಇಂಗ್ಲೆಂಡ್ ದೇಶಕ್ಕೆ ತೆರಳಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | ಶ್ರೀ ಕಪಿಲನ್, ವಾಹನ ಚಾಲಕ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ದಿನಾಂಕ 26-07-2018ರಿಂದ 6-9-2018ರವರೆಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ 06 ಇಲ್ಲದಂತೆ ಅವರ ವೈಯಕ್ತಿಕ ಕಾರಣಗಳಿಗಾಗಿ ಇಂಗ್ಲೆಂಡ್ ದೇಶದ ಮ್ಯಾಂಚೆಸ್ಟರ್‌ಗೆ ತೆರಳುವ ಸಂಬಂಧ ಅನುಮತಿ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2018/5.63 | ಪ್ರೊ. ಜಿ. ಸುಬ್ರಮಣ್ಯ, ಪ್ರಾಧ್ಯಾಪಕರು(ನಿವೃತ್ತ), ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು, ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸುವ ಬಗ್ಗೆ. |
| ತೀರ್ಮಾನ | ಪ್ರೊ. ಜಿ. ಸುಬ್ರಮಣ್ಯ, ಪ್ರಾಧ್ಯಾಪಕರು(ನಿವೃತ್ತ), ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು, ಇವರನ್ನು ಜೆನೆಟಿಕ್ಸ್ ಮತ್ತು ಜೆನೋಮಿಕ್ಸ್ ಅಧ್ಯಯನ ವಿಭಾಗಕ್ಕೆ ಮಾಹೆಯಾನ ರೂ.25,000/-ಗಳ ಗೌರವ ಸಂಭಾವನೆಯೊಂದಿಗೆ ಒಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಅನುಮೋದಿಸಿತು. |
| 2018/5.64 | ದಿನಾಂಕ 20.06.2018ರಂದು ಜರುಗಿದ ವಿಶ್ವವಿದ್ಯಾನಿಲಯದ ಕಟ್ಟಡ ಸಮಿತಿ ಸಭೆಯ ನಡಾವಳಿಯನ್ನು ವಿ ವಿ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ. |
| ತೀರ್ಮಾನ | ದಿನಾಂಕ 20.06.2018ರಂದು ಜರುಗಿದ ವಿಶ್ವವಿದ್ಯಾನಿಲಯದ ಕಟ್ಟಡ ಸಮಿತಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| **2018/5.65** | ವಿಶ್ವವಿದ್ಯಾನಿಲಯದ ಈಜುಕೊಳದ ಪ್ರವೇಶ ದರಗಳನ್ನು ಪರಿಷ್ಕರಿಸುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ಈಜುಕೊಳದ ಕೆಲವು ಪ್ರವೇಶ ದರಗಳನ್ನು ಪರಿಷ್ಕರಿಸಲು ಹಾಗೂ ಇನ್ನಿತರ ಈ ಕೆಳಗಿನ ಅಂಶಗಳಿಗೆ ಸಿಂಡಿಕೇಟ್ ಅನುಮೋದಿಸಿತು. |

I. ದಿನಾಂಕ 6–3–2018ರಂದು ಜರುಗಿದ ಸಿಂಡಿಕೇಟ್ ನಿರ್ಣಯದಂತೆ ಭಾನುವಾರದಂದು ವಿದ್ಯಾರ್ಥಿಗಳಿಗೆ, ವಿಶ್ವವಿದ್ಯಾನಿಲಯದ ಉದ್ಯೋಗಿಗಳಿಗೆ ಮತ್ತು ಪಾಸ್‌ಗಳನ್ನು ಹೊಂದಿದವರಿಗೆ ಮಾತ್ರ ಪ್ರವೇಶ ನೀಡುತ್ತಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಬರುವ ಆದಾಯ ಕಡಿಮೆಯಾಗಿದ್ದು, ಈ ಸಂಬಂಧ ಭಾನುವಾರ ರಜೆ ಘೋಷಿಸಿ ಸೋಮವಾರದಂದು ತೆರೆಯಲು;

II. ಎರಡನೇ ಶನಿವಾರದಂದು ಈಜುಕೊಳವನ್ನು ಸಾರ್ವಜನಿಕರ ಉಪಯೋಕ್ಕಾಗಿ ತೆರೆದು, ಈಜುಕೊಳದ ಉದ್ಯೋಗಿಗಳಿಗೆ ಅಂದು ನೀಡಬೇಕಾಗಿದ್ದ ರಜೆಯನ್ನು ಬೇರೊಂದು ದಿನ ಪಡೆಯಲು ಹಾಗೂ ಪ್ರತಿ ಶನಿವಾರ ಮಧ್ಯಾಹ್ನ 02:00ರಿಂದ 03:00ರವರೆಗೆ ಸಾರ್ವಜನಿಕರ ಒಂದು ಹೆಚ್ಚಿನ ಬ್ಯಾಚ್ ನಡೆಸಲು;

III. ಸಾರ್ವಜನಿಕರ ಬ್ಯಾಚ್ ಸಮಯವನ್ನು ಕೆಳಕಂಡಂತೆ ಬದಲಾಯಿಸಲು

1. ಬೆಳಿಗ್ಗೆ 06:00 ರಿಂದ 07:00
2. ಬೆಳಿಗ್ಗೆ 07:00 ರಿಂದ 08:00
3. ಬೆಳಿಗ್ಗೆ 08:00 ರಿಂದ 09:00
4. ಬೆಳಿಗ್ಗೆ 09:00 ರಿಂದ 10:00
5. ಮಧ್ಯಾಹ್ನ 03:00 ರಿಂದ 04:00
6. ಸಂಜೆ 04:00 ರಿಂದ 05:00 (ಮಹಿಳೆಯರಿಗಾಗಿ)
7. ಸಂಜೆ 05:00 ರಿಂದ 06:00

IV. ಪ್ರತಿ ಮಾಹೆ ಅನುಕೂಲಕರ ವೇಳೆಯಲ್ಲಿ ಈಜುತರಬೇತಿ ಶಿಬಿರವನ್ನು ಏರ್ಪಡಿಸಲು ಹಾಗೂ

V. ವಿಶ್ವವಿದ್ಯಾನಿಲಯದ ಈಜುಕೊಳದ ಕೆಲವು ಪ್ರವೇಶ ದರಗಳನ್ನು ಪರಿಷ್ಕರಿಸಲು

**1. ಪ್ರವೇಶ ದರ (ಪ್ರತಿ ಬ್ಯಾಚಿಗೆ ಒಬ್ಬರಿಗೆ)**

| ಕ್ರ. ಸಂ. | ವಿವರ | ಹಾಲಿ ದರ (ರೂ.) | ಸೂಚಿತ ಹೊಸ ದರ (ರೂ.) |
|---|---|---|---|
| 1 | ಸಾರ್ವಜನಿಕರಿಗೆ (ವಯಸ್ಕರಿಗೆ) | **60–00** | **60–00** |
| 2 | 12 ವರ್ಷ ಒಳಪಟ್ಟ ಸಾರ್ವಜನಿಕ ಮಕ್ಕಳಿಗೆ | **40–00** | **40–00** |
| 3 | ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ | **30–00** | **30–00** |

**2. ಮಾಸಿಕ ಶುಲ್ಕ ಒಬ್ಬರಿಗೆ ಪ್ರತಿ ಬ್ಯಾಚಿಗೆ**

| | | | |
|---|---|---|---|
| 1 | ಸಾರ್ವಜನಿಕರಿಗೆ (ವಯಸ್ಕರಿಗೆ) | **1,200–00** | **1,000–00** |
| 2 | 12 ವರ್ಷ ಒಳಪಟ್ಟ ಸಾರ್ವಜನಿಕ ಮಕ್ಕಳಿಗೆ | **600–00** | **600–00** |
| 3 | ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ | **500–00** | **500–00** |

| | | | |
|---|---|---|---|
| 4 | ವಿಶ್ವವಿದ್ಯಾನಿಲಯದ ಉದ್ಯೋಗಿಗಳಿಗೆ/ ಮಕ್ಕಳಿಗೆ (ಇಬ್ಬರಿಗೆ ಸೀಮಿತ) ಕುಲಪತಿ/ ಕುಲಸಚಿವರು/ ನಿರ್ದೇಶಕರು ಸೂಚಿಸುವವರಿಗೆ) | **300-00** | **300-00** |
| 5. | ವಿಶ್ವವಿದ್ಯಾನಿಲಯದ ನಿವೃತ್ತ ನೌಕರರಿಗೆ | **300-00** | **300-00** |
| 6. | ಹಿರಿಯ ನಾಗರಿಕರಿಗೆ/ಅಂಗವಿಕಲರಿಗೆ (ಶೇ. 50ಕ್ಕಿಂತ ಹೆಚ್ಚಿನ ಅಂಗ ವೈಪಲ್ಯ) | **300-00** | **500-00** |

**3. 06 ತಿಂಗಳ ಒಂದು ಬ್ಯಾಚಿಗೆ ಒಬ್ಬರಿಗೆ**

| | | | |
|---|---|---|---|
| 1 | ಸಾರ್ವಜನಿಕರಿಗೆ (ವಯಸ್ಕರಿಗೆ) | 5,500-00 | **4,500-00** |

**12 ತಿಂಗಳ ಒಂದು ಬ್ಯಾಚಿಗೆ ಒಬ್ಬರಿಗೆ**

| | | | |
|---|---|---|---|
| 1 | ಸಾರ್ವಜನಿಕರಿಗೆ (ವಯಸ್ಕರಿಗೆ) | 10,000-00 | **9,000-00** |

**4. ವಾರ್ಷಿಕ ಶುಲ್ಕ ಈಜು ಸ್ಪರ್ಧೆಯಲ್ಲಿ ಭಾಗವಹಿಸುವವರಿಗೆ (12 ತಿಂಗಳಿಗೆ)**

| | | | |
|---|---|---|---|
| 1 | ಈಜು ಸ್ಪರ್ಧೆಯಲ್ಲಿ ಭಾಗವಹಿಸಲು ಆಯ್ಕೆಯಾಗುವ ಮಕ್ಕಳೊಬ್ಬರಿಗೆ ಒಂದು ವರ್ಷಕ್ಕೆ (ಈಜು ತರಬೇತುದಾರರು ದೃಢಿಕರಿಸಿದವರಿಗೆ ಈಜು ಸ್ಪರ್ಧಿಗಳನ್ನು ಉತ್ತೇಜಿಸುವ ದೃಷ್ಟಿಯಿಂದ) | 4,000-00 | **4,000-00** |
| 2 | ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ಇವರು ಪ್ರತಿ ವರ್ಷ ಹಾಲಿ ದರದ ಮೇಲೆ ಶೇ.10ರಷ್ಟನ್ನು ಹೆಚ್ಚಿಸಿ ಹೊಸ ದರವನ್ನು ನಿಗದಿಪಡಿಸಿ ಅನುಮೋದನೆ ಪಡೆಯುವುದು. | | |

**5. ಈಜು ಸ್ಪರ್ಧೆಗಳಿಗೆ (ಒಂದು ದಿನಕ್ಕೆ)**

| | | | |
|---|---|---|---|
| 1 | ವಿಶ್ವವಿದ್ಯಾನಿಲಯವೇ ಈಜು ಸ್ಪರ್ಧೆಯನ್ನು ಏರ್ಪಡಿಸಿದರೆ | ಉಚಿತ | – |
| 2 | ಸರ್ಕಾರದ ಇಲಾಖೆಗಳು / ಸರ್ಕಾರದ ಸಂಘ/ ಮೈಸೂರ ಜಿಲ್ಲಾ ಈಜು ಸಂಸ್ಥೆಯವರು ಈಜು ಸ್ಪರ್ಧೆಯನ್ನು ಏರ್ಪಡಿಸಿದರೆ | 2,500-00 | **4,000-00** |
| 3 | ಖಾಸಗಿಯವರು ಈಜು ಸ್ಪರ್ಧೆಯನ್ನು ಏರ್ಪಡಿಸಿದರೆ | 3,500-00 | **7,000-00** |
| 4 | ಚಲನಚಿತ್ರದವರು ಈಜುಕೊಳವನ್ನು ಚಿತ್ರೀಕರಣಕ್ಕೆ ಕೋರಿದರೆ | 35,000-00 | **75,000-00** |

**6. ವಿಶೇಷ ಈಜು ತರಬೇತಿ ಶಿಬಿರಕ್ಕೆ ಒಬ್ಬರಿಗೆ ಒಂದು ಬ್ಯಾಚಿಗೆ (21 ದಿನಗಳ ಅವಧಿಗೆ)**

| | | | |
|---|---|---|---|
| 1 | ವಿಶೇಷ ಈಜು ತರಬೇತಿ ಶಿಬಿರಕ್ಕೆ ಒಬ್ಬರಿಗೆ (21 ದಿನಗಳ ಅವಧಿಗೆ) | 2,900-00 | **3,000-00** |
| 2 | ಪರಿಣಿತ ಈಜು ತರಬೇತಿ ಶಿಬಿರ Advance Camp (30 ದಿನಗಳ ಅವಧಿಗೆ) | 3,600-00 | **4,000-00** |
| 3 | ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ಇವರು ಪ್ರತಿ ವರ್ಷ ಹಾಲಿ ದರದ ಮೇಲೆ ರೂ.250-00ಗಳನ್ನು ಹೆಚ್ಚಿಸಿ ಹೊಸ ದರವನ್ನು ನಿಗದಿಪಡಿಸಲು ಕ್ರಮಕೈಗೊಳ್ಳುವುದು. | | |

| | |
|---|---|
| 2018/5.66 | **PROMOTIONS TO UNIVERSITY TEACHERS UNDER UGC CAS** |
| ತೀರ್ಮಾನ | The recommendations of the Screening Committee of various subjects for promotion of teachers of respective subjects to the higher AGP furnished at **APPENDIX – A,** are approved.<br>The Syndicate also decided that the monetary benefits of these teachers shall be from the date of approval of the Syndicate Meeting i.e. 21-6-2018.<br>Further, the Syndicate also decided to obtain Legal opinion from the Legal Adviser of the University before issuing order in respect of teachers who were recruited directly during 2007. |
| 2018/67 | 371 ಜೆ ಹೈದರಾಬಾದ್ ಮತ್ತು ಕರ್ನಾಟಕ ಹಾಗೂ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ. |
| ತೀರ್ಮಾನ | 371 ಜೆ ಹೈದರಾಬಾದ್ ಮತ್ತು ಕರ್ನಾಟಕ ಹಾಗೂ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸುವ ಕಾರಣದಿಂದಾಗಿ ಮುಂದೂಡಲಾಯಿತು. |

**ಇತರೆ ವಿಷಯಗಳು**

1. ಸಿಂಡಿಕೇಟ್ ಸಭೆಯ ಸದಸ್ಯರುಗಳ ಆಕ್ಷೇಪಣೆಯ ಮೇರೆಗೆ ಸ್ಪಷ್ಟವಾಗಿ ಕಾಣುವ ಕಾರ್ಯಸೂಚಿಯ ಪ್ರತಿಗಳನ್ನು ಇನ್ನೂ ಮುಂದೆ ನೀಡಲು ಸೂಚಿಸಲಾಯಿತು.
2. ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ನಡೆಸುತ್ತಿರುವ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡದ ಕಿರಿಯ ಸಂಶೋಧನ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಶಿಷ್ಯವೇತನವನ್ನು ರೂ.20,000/-ಗಳಿಗೆ ಹಾಗೂ ಹಿರಿಯ ಸಂಶೋಧನ ವಿದ್ಯಾರ್ಥಿಗಳಿಗೆ ರೂ. 22,000/-ಗಳಿಗೆ ಹೆಚ್ಚಿಸಲು ಸಿಂಡಿಕೇಟ್ ತೀರ್ಮಾನಿಸಿತು.
3. ಬಿ.ಎಡ್. ಪ್ರಾಕ್ಟಿಕಲ್ ಪರೀಕ್ಷೆಯನ್ನು ನಿರ್ವಹಿಸುವವರಿಗೂ ಸಂಭಾವನೆಯನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು.

ಕೊನೆಯಲ್ಲಿ ಮಾನ್ಯ ಕುಲಪತಿಗಳು, ಸಿಂಡಿಕೇಟ್ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿ ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೂ ವಂದನೆ ಸಲ್ಲಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ** **ಕುಲಪತಿ ಮತ್ತು ಅಧ್ಯಕ್ಷರು**